

ಕಲ್ಯಾಣ ಕಿರಣ



ಬಸವ ಗುರುವಿನ ತತ್ವ ಲೋಕದಿ ಹಬ್ಬಲಿ

ಆಗಸ್ಟ್-2014 ಬೆಲೆ.₹ 20



ಬಸವ ಪಂಚಮಿ ಉದ್ಘಾಟನೆ ಶರಣ. ಸನ್ಮಾನ್ಯ ಸಚಿವರಾದ ಹಿ. ಆಂಜನೇಯ ಅವರಿಂದ



ದಾಸೋಹಮೂರ್ತಿ ನೀಲಾಂಬಿಕಾ ಧ್ವಯಿಂದ



ಬಸವ ಪಂಚಮಿ –2014



ಧ್ವಜಾರೋಹಣ ಶರಣ. ಶಂಕರ ಬಿದರಿ. ಐ.ಪಿ.ಎಸ್.(ನಿ) ಇವರಿಂದ



ಅಕ್ಕನ ಅಮರಗೀತೆ ಪುಸ್ತಕ ಬಿಡುಗಡೆ ಶರಣೆ ಡಾ|| ವಿಜಯಲಕ್ಷ್ಮಿ ಬಾಳೇಕುಂದ್ರಿ ಅವರಿಂದ

ಯುಗದ ಧರ್ಮೋತ್ಸಾಹ

ಬಸವ ಧರ್ಮ ಯುಗದ ಮರು ಮಹಾಉತ್ಸವ ನೋಡಿರೆ....
ವಿಶ್ವಕಲ್ಯಾಣ ಮಿಷನ್ ಧರ್ಮ ಶುಭೋದಯದಿ
ಬಸವ ಧರ್ಮ ಮಹಾ ಪೀಠದ ಓಂಕಾರ ಶ್ರೀಕಾರದಿ
ರಾಷ್ಟ್ರೀಯ ಬಸವ ದಳಗಳ ಧರ್ಮ ವೀರತ್ವದಿ
ಲಿಂಗಾಯತ ಧರ್ಮ ಮರು ಹೊಳಪ ಮಿಂಚಿನಲಿ
ಯುಗದ ಧರ್ಮೋತ್ಸಾಹ ನೋಡಿರೇ........
ಬಸವ ಧರ್ಮ ಯುಗದ ಮರು ಮಹಾ ಉತ್ಸವ ನೋಡಿರೆ....

ಪ್ರವಚನ ಪಿತಾಮಹ ಮಹಾಗುರು ಲಿಂಗಾನಂದರು
ವಿಶ್ವಧರ್ಮ ಪ್ರವಚನ ಪಿತಾಮಹರೆನಿಸುತ
ಬಸವ ಧರ್ಮ ಪ್ರವಚನದ ಮಹಾಶಕ್ತಿ ಮಹಾಮಾತೆ
ಯುಗ ಮಹಿಳಾ ಮಹಾಜಗದ್ಗುರು ಪ್ರಥಮ ಪ್ರಮಥರಾಗಿ
ಬಸವ ತತ್ವ ಸಿದ್ಧಾಂತಗಳ ಸಾಧಿಸಿ ಅರುಹುತ
ಸೃಷ್ಟಿಕರ್ತ ಲಿಂಗದೇವ ಬಸವ ಧರ್ಮದ ದೇವ ಕುರುಹೆಂದು
ಗುರು ಮಿಗಿಲಾಗಿ ಶರಣರ ನಿರಾಕಾರ ಲಿಂಗದೇವನ ಸಾಕ್ಷಾತ್ಕರಿಸಿದ
ಶರಣರೆಲ್ಲರ ಮಾತೃಹೃದಯಿ ಮಹಾಮಾತಾಜಿ ಚಿತ್ಕಳೆಯಲಿ
ಯುಗದ ಧರ್ಮೋತ್ಸಾಹ ನೋಡಿರೆ........

ಬೆಂಗಳೂರಲಿ ಧರ್ಮಪಿತ ಬಸವ ಮಹಾಮಂಟಪ
ಕೂಡಲ ಸಂಗಮದಲಿ ಬಸವ ಧರ್ಮದ ಮಹಾಮನೆ ಮಹಾಮಠ
ಧಾರವಾಡದಲಿ ಜಗನ್ಮಾತೆ ಅಕ್ಕಮಹಾದೇವಿ ಅನುಭಾವ ಪೀಠ
ಬಸವ ಗಂಗೋತ್ರಿಯಲಿ ಚಿನ್ಮಯಜ್ಞಾನಿ ಚನ್ನಬಸವ ಜ್ಞಾನಪೀಠ
ಬಸವ ಕಲ್ಯಾಣದಲಿ ಶೂನ್ಯ ಪೀಠಾಧೀಶ ಮಹಾಯೋಗಿ ಅಲ್ಲಮಪೀಠ
ಮಹಾರಾಷ್ಟ್ರದ ಅಳತೆಯ ಅಲ್ಲಮಗಿರಿಯಲಿ ಅಲ್ಲಮಪ್ರಭುಯೋಗ ಪೀಠ
ರಾಜಧಾನಿ ನವದೆಹಲಿಯಲಿ ಮಾತಾ ಆಶ್ರಮ
ಭವ್ಯ ಭಾರತದ ಉದ್ದಗಲಕ್ಕೂ ಬಸವ ಧರ್ಮ ಪಸರಿಸುವ
ಯುಗದ ಧರ್ಮೋತ್ಸಾಹ ನೋಡಿರೇ........

ಶ್ವೇತ ಉಡುಪು ಧಾರಣೆಯ ಶರಣ ಕಾಯ
ಭುಜದಲಿ ಶ್ರೀಗುರುಬಸವ ರಕ್ಷೆಯ ಧರ್ಮಕವಚ
ನೊಸಲಿನಲಿ ತ್ರಿಕಾಲ ಜ್ಞಾನದ ಶ್ರೀ ವಿಭೂತಿ ಲಾಂಛನ
ಕೊರಳಲಿ ಸೃಷ್ಟಿಕರ್ತ ಲಿಂಗದೇವನ ಹೃದಯಲಿಂಗಧಾರಣೆ
ಹಸ್ತದಲಿ ಶ್ರೀಗುರು ಬಸವ ವಚನಾಮೃತದ ಗ್ರಂಥಪುಷ್ಪ
ನುಡಿಗಳಲಿ ತುಂಬಿಹುದು ದೇವಮಂತ್ರ ಧರ್ಮಗುರು ಮಂತ್ರದ ಓಂಕಾರ
ನಡೆಯಲಿ ಹೆಜ್ಜೆಗುರುತಾಗಿಹುದು ಗುರು ಬಸವ ಸಿದ್ಧಾಂತದ ಝೇಂಕಾರ
ಅನುದಿನವು ಇಲ್ಲಿಹುದು ನೆನಹು ಪ್ರಾರ್ಥನೆ ಮೇಳಗಳ ಬಸವ ಹರ್ಷಧಾರೆ
ಇಂತಿರ್ಪ ಲಿಂಗದೇವಾ ಚಿತ್ಕಳೆ ಪೂರ್ಣ ಮಹಾ ಮಾತಾಜಿ ಬಸವ ತೇಜದಲಿರ್ಪ
ಯುಗದ ಧರ್ಮೋತ್ಸಾಹ ನೋಡಿರೆ........
ಬಸವ ಧರ್ಮ ಯುಗದ ಮರು ಮಹಾ ಉತ್ಸವ ನೋಡಿರೆ....

– ಸೋ.ದಾ.ವಿರೂಪಾಕ್ಷಗೌಡ, ಹೊಸಪೇಟೆ

|| ಓಂ ಶ್ರೀ ಗುರು ಬಸವಲಿಂಗಾಯ ನಮಃ ||

866666

ಸಂಪುಟ-45	ಬಸವ ಶಕೆ -881	ಪಂಚ ವಾರ್ಷಿಕ ಸದಸ್ಯತ್ವ 1000 ರೂ.
ಸಂಚಿಕೆ-08	ಆಗಸ್ಟ್-2014	ವಾರ್ಷಿಕ ಚಂದಾ 200 ರೂ.

ಕಿರಣ ಗನ್ನಡಿ

ಹಬ್ಬ – ಹುಣ್ಣಿಮೆ–ಉತ್ಸವಗಳು

* ಬಸವ ಜ್ಯೋತಿ ಸಮಾರೋಪ – ಆಗಸ್ಟ್ 29
* ಪೂಜ್ಯ ಶ್ರೀ ಲಿಂಗಾನಂದ ಸ್ವಾಮೀಜಿಯವರ 84ನೇ ಜಯಂತಿ – ಆಗಸ್ಟ್ 29
* ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬ ಹಾಗೂ ಪೂಜ್ಯ ಮಾತೆ ಗಂಗಾದೇವಿಯವರ ವರ್ಧಂತಿ ಆಗಸ್ಟ್ 29

ಕಲ್ಯಾಣ ಕಿರಣ ಚಂದಾ

ಕಲ್ಯಾಣ ಕಿರಣದ ವಾರ್ಷಿಕ ಚಂದಾ 200ರೂ. ಪಂಚವಾರ್ಷಿಕ ಚಂದಾ 1000ರೂ. ಕಳಿಸಬೇಕು ಎನ್ನುವವರು ಎಂ.ಓ. ಮೂಲಕ, ಬ್ಯಾಂಕ್ ಡ್ರಾಫ್ಟ್ ಮೂಲಕ ಕಳಿಸಬಹುದು. ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ಹೆಸರಿಗೆ ಡಿ.ಡಿ. ತೆಗೆಸಬೇಕು.

ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್

ಬಸವ ಮಂಟಪ, 2035, 20ನೇ ಮೇನ್, ರಾಜಾಜಿನಗರ 2ನೇ ಬ್ಲಾಕ್ ಬೆಂಗಳೂರು-560010

ದೂರವಾಣಿ : 080-23131476 / 9945806297

Kalyana Kirana -Reg No.19988/70. Monthly Magazine Edited and Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-560010. Phone : 080-23131476, Send SMS to 9945806297

Email :- kalyanakirana1970@gmail.com

ಓಂ ಶ್ರೀ ಗುರು ಬಸವಲಿಂಗಾಯ ನಮಃ

866666

ಕಾಯಕವೇ ಕೈಲಾಸವೆಂಬ ಮಹಾಮಂತ್ರವನ್ನು ಸಾರಿದ
ಬಸವ ಕಲ್ಯಾಣ ಸುಕ್ಷೇತ್ರದಲ್ಲಿ ಹದಿಮೂರನೆಯ

ಕಲ್ಯಾಣ ಪರ್ವ

2014ರ ಅಕ್ಟೋಬರ್ 18, 19 ಮತ್ತು 20ರಂದು

ಶರಣ ಬಂಧುಗಳಿಗೆ ಶರಣು ಶರಣಾರ್ಥಿ.

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಶರಣ ಗಣಮಣಿ ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವಾಯತರೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತೆ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮದಲ್ಲಿ ಶರಣ ಮೇಳ ಎಂಬ ಬೃಹತ್ ಧಾರ್ಮಿಕ ಸಮಾವೇಶವನ್ನು 1988ರಿಂದ ಪ್ರತಿವರ್ಷವೂ ಜನವರಿ 11 ರಿಂದ 15ರವರೆಗೆ ನಡೆಸಿಕೊಂಡು ಬರಲಾಗುತ್ತಿದ್ದು 27ನೆಯ ಶರಣ ಮೇಳವು ಇದೇ 2014ರ ಜನವರಿಯಲ್ಲಿ ಯಶಸ್ವಿಯಾಗಿ ಜರುಗಿದೆ. ಬೀದರ ಜಿಲ್ಲೆಯಲ್ಲಿರುವ ಬಸವ ಕಲ್ಯಾಣವು 12ನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರವಾಗಿತ್ತು. ಲಿಂಗದೇವನ ಅನುಗ್ರಹವಾಗಿ ಇಷ್ಟಲಿಂಗದ ಪರಿಕಲ್ಪನೆ ಮೂಡಿ ಧರ್ಮಪಿತರು ಲಿಂಗಾಯತ ಧರ್ಮದ ರೂಪು ರೇಷೆ ಹಾಕಿದುದು ಕೂಡಲ ಸಂಗಮದಲ್ಲಿ, ಆ ನೀಲನಕ್ಷೆಯು ಕಾರ್ಯರೂಪಕ್ಕೆ ಬಂದುದು ಬಸವ ಕಲ್ಯಾಣದಲ್ಲಿ.

"ಕಪಿಲಸಿದ್ಧಮಲ್ಲಿಕಾರ್ಜುನಾ, ನಿಮ್ಮ ಸಂಗನ ಬಸವಣ್ಣ ಬಂದು
ಕಲ್ಯಾಣದಲ್ಲಿ ಮಹಾಮನೆಯ ಕಟ್ಟಿದಡೆ
ಮರ್ತ್ಯಲೋಕವೆಲ್ಲವೂ ಭಕ್ತಿಸಾಮ್ರಾಜ್ಯವಾಯಿತು"

ಎಂದು ಬಸವಯೋಗಿ ಸಿದ್ಧರಾಮೇಶ್ವರರು ಹೇಳುವಂತೆ, "ಅಯ್ಯಾ, ಭಕ್ತಿಗೆ ಬೀಡಾದುದು ಕಲ್ಯಾಣ 36 ವರ್ಷ, ಅನುಭವಕ್ಕೆ ಶಿವಸದನವಾದುದು 27 ವರ್ಷ" ಎಂದು ಧರ್ಮಪಿತರು ಸಾರುವಂತೆ ಬಸವ ಕಲ್ಯಾಣವು ವಿಕ್ರಮನಾಮ ಸಂವತ್ಸರ (ಕ್ರಿ.ಶ.1160) ದಿಂದ ರಾಕ್ಷಸನಾಮ ಸಂವತ್ಸರ (ಕ್ರಿ.ಶ.1196) ದ ವರೆಗೆ ಶ್ರೀ ಗುರು ಬಸವಣ್ಣನವರ ಪರುಷ ಪಾದದಿಂದ ಭಕ್ತಿಯ ಬೀಡಾಗಿತ್ತು. ಈ ಪವಿತ್ರ ಶರಣ ಭೂಮಿಯು ಇಂದು ನಮಗೆಲ್ಲ ಧರ್ಮಭೂಮಿ (Holy land). ಇಂಥ ಸುಕ್ಷೇತ್ರದಲ್ಲಿ ವರ್ಷಕ್ಕೊಮ್ಮೆಯಾದರೂ ಬಸವ ಭಕ್ತರು ಸಮಾವೇಶವಾಗಬೇಕೆಂದು 2002ನೆಯ ಇಸವಿಯಿಂದಲೂ ಕಲ್ಯಾಣಪರ್ವ ಎಂಬ ವಾರ್ಷಿಕ ಉತ್ಸವವನ್ನು ನಡೆಸಲಾಗುತ್ತಿದೆ. 2014ನೆಯ ಇಸವಿಯಲ್ಲಿ 13ನೆಯ ಕಲ್ಯಾಣ ಪರ್ವವು ಜರುಗಲಿದ್ದು, ಅಕ್ಟೋಬರ್ 18,19 ಮತ್ತು 20ರಂದು ನಡೆಯಲಿದೆ.

ಶರಣ(ಶನಿ)ವಾರ, ದಿ. 18ರಂದು ಬೆಳಿಗ್ಗೆ 10-30ಕ್ಕೆ ಉದ್ಘಾಟನೆ ಮತ್ತು ಸಾಮೂಹಿಕ ಪ್ರಾರ್ಥನೆ, ಮಧ್ಯಾಹ್ನ 3-30ರಿಂದ 5-30ರವರೆಗೆ ರಾಷ್ಟ್ರೀಯ ಬಸವ ದಳದ ಸಮಾವೇಶ ; ಸಂಜೆ -6-30ರಿಂದ ಚಿಂತನಗೋಷ್ಠಿ. ದಿ.19 ದೇವ(ಭಾನು)ವಾರದಂದು ಬೆಳಿಗ್ಗೆ 07-30ಕ್ಕೆ ಶರಣ ವಂದನೆ-ಶರಣರಿಗೆ ಶರಣಾರ್ಥಿ, ಬೆಳಿಗ್ಗೆ 10-30ಕ್ಕೆ ಸಾಮೂಹಿಕ ಪ್ರಾರ್ಥನೆ ಮಧ್ಯಾಹ್ನ 3-30ರಿಂದ 5-30ರವರೆಗೆ ಆಶುಭಾಷಣ ಸ್ಪರ್ಧೆ, ಸಂಜೆ 6-30ರಿಂದ ಚಿಂತನಗೋಷ್ಠಿ ದಿ.20 ಶಿವ(ಸೋಮ)

ವಾರದಂದು ಅಕ್ಕನಾಗಲಾಂಬಿಕೆಯ ಸಂಸ್ಮರಣೆಯ ನಿಮಿತ್ತ ಬಸವ ಧರ್ಮ ವಿಜಯೋತ್ಸವ ಕಾರ್ಯಕ್ರಮ ನಂತರ ಅಲ್ಲಮಪ್ರಭು ಶೂನ್ಯ ಪೀಠಾರೋಹಣ ಮತ್ತು ಸಮಾರೋಪ ಸಮಾರಂಭ ಜರುಗಲಿವೆ.

ಕಲ್ಯಾಣ (ಗಣ) ಪರ್ವಕ್ಕೆ ಧನ ಸಹಾಯ

ಕಲ್ಯಾಣ ಎಂಬುದು ಒಂದು ಸ್ಥಳದ ಹೆಸರು; ಮತ್ತು ವಿಶ್ವಗುರು ಬಸವಣ್ಣನವರ ಧ್ಯೇಯವೇ ಎಲ್ಲ ಮಾನವರ ಲೇಸು -ಕಲ್ಯಾಣ. ಆದರ್ಶ ಕಲ್ಯಾಣ ರಾಜ್ಯ (Welfare state) ನಿರ್ಮಾಣವೇ ಅವರ ಹೋರಾಟದ ಗುರಿಯಾಗಿತ್ತು. ಗಣ ಎಂದರೆ ಸಮೂಹ, ಪರ್ವ ಎಂದರೆ ಹಬ್ಬ, ಶರಣ ಗಣವು ಶರಣ ಭೂಮಿ ಬಸವ ಕಲ್ಯಾಣದಲ್ಲಿ ನೆರೆದು ಆದಿ ಶರಣರ ಜೀವನ-ಸಾಧನೆ-ಸಂದೇಶಗಳನ್ನು ಕೊಂಡಾಡುವ ಹಬ್ಬ ಈ ಕಲ್ಯಾಣ ಪರ್ವ. ಅಂದು ಧರ್ಮಪಿತ ಬಸವಣ್ಣನವರು ಗಣಪರ್ವಗಳನ್ನು ಕಲ್ಯಾಣದಲ್ಲಿ ನಡೆಸುತ್ತಿದ್ದು, ಭಕ್ತರು ಅಂಗ, ವಂಗ, ಕಳಿಂಗ, ಗುರ್ಜರ, ಸಿಂಹಳ ಮುಂತಾದ ಭಾಗಗಳಿಂದೆಲ್ಲ ಸಮಾವೇಶವಾಗುತ್ತಿದ್ದುದಾಗಿ ಹರಿಹರ, ಸಿಂಗಿರಾಜ ಮುಂತಾದವರು ತಮ್ಮ ಕಾವ್ಯಗಳಲ್ಲಿ ಬಣ್ಣಿಸುತ್ತಾರೆ. ಅಂಥ ಗಣಪರ್ವವನ್ನು ಇಂದು ನೀವು ನಾವು ಮಾಡಿ ತೋರಿಸಬೇಕಾಗಿದೆ. ಅಕ್ಟೋಬರ್ 17ರ ರಾತ್ರಿಯಿಂದ ಅಕ್ಟೋಬರ್ 21 ರ ಬೆಳಗಿನವರೆಗೆ ಕಲ್ಯಾಣ ಪರ್ವದಲ್ಲಿ ಸಮಾವೇಶವಾಗುವ ಶರಣ ಬಂಧುಗಳಿಗೆ ವಸತಿ ಮತ್ತು ಪ್ರಸಾದದ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಅವಶ್ಯಕತೆ ಇರುತ್ತದೆ. ದಾನಿಗಳು ಮುಂದೆ ಸೂಚಿಸಿದಂತೆ ಧನ ಸಹಾಯ ಮಾಡಬಹುದು.ಶರಣ ಬಂಧುಗಳು ಒಂದು ಹೊತ್ತಿನ ಪ್ರಸಾದ ದಾಸೋಹದ ವೆಚ್ಚವನ್ನು ಭರಿಸಲೂ ಅವಕಾಶ ಉಂಟು.

1. ಮಹಾಪೋಷಕರು	:	10000 ರೂ. ಮತ್ತು ಮೇಲೆ ಕೊಟ್ಟವರು
2. ಪೋಷಕರು	:	5000 ರೂ. ಮತ್ತು ಮೇಲೆ ಕೊಟ್ಟವರು
3. ದಾನಿಗಳು	:	2000 ರೂ. ಮತ್ತು ಮೇಲೆ ಕೊಟ್ಟವರು
4. ಹಿತೈಷಿಗಳು	:	1000 ರೂ
5. ಸ್ವಾಗತ ಸಮಿತಿ ಸದಸ್ಯತ್ವ	:	500 ರೂ
6. ಪ್ರತಿನಿಧಿ ಶುಲ್ಕ	:	150 ರೂ.

ಅನ್ನದಾಸೋಹಕ್ಕಾಗಿ ಭಕ್ತಿಪೂರ್ವಕ ಕಾಣಿಕೆಗಳನ್ನು ಶಕ್ತ್ಯಾನುಸಾರ ಕೊಡಬಹುದು.

ವಿ.ಸೂ. : ವಾರ್ಷಿಕ ಸಮಾವೇಶವಾದ ಕಲ್ಯಾಣಪರ್ವಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/10000 ರೂಪಾಯಿಗಳ ಪುದುವಟ್ಟು (F.D) ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಕಲ್ಯಾಣಪರ್ವದ ದಾಸೋಹಕ್ಕೆ ವಿನಿಯೋಗಿಸಲಾಗುವುದು. ರಸೀತಿ ಪುಸ್ತಕ, ಕರಪತ್ರಗಳನ್ನು ಪಡೆದು ದೇಣಿಗೆ ಸಂಗ್ರಹಿಸುವವರಿಗೂ ಅವಕಾಶವಿದೆ.

ಇನ್‌ಕಮ್ ಟ್ಯಾಕ್ಸದಲ್ಲಿ 80ಜಿ ರಿಯಾಯಿತಿಯ ಸೌಲಭ್ಯವೂ ಇದೆ.

ಸಂಪರ್ಕಿಸುವ ವಿಳಾಸಗಳು

ಪೂಜ್ಯ ಶ್ರೀ ಮಹಾಜಗದ್ಗುರು
ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ (ರಿ.)
ಬಸವ ಮಂಟಪ, 2035, 20ನೆಯ ಮುಖ್ಯರಸ್ತೆ,
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
☎ 080-22923736/9448137508

ಪೂಜ್ಯ ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಸ್ವಾಮಿಗಳು
ಪೀಠಾಧ್ಯಕ್ಷರು, ಅಲ್ಲಮಪ್ರಭು ಶೂನ್ಯ ಪೀಠ
ಬಸವ ಧರ್ಮ ಪೀಠ (ರಿ.)
ಬಸವ ಮಹಾಮನೆ, ಬಸವ ಕಲ್ಯಾಣ-585 327
ತಾ-ಬಸವಕಲ್ಯಾಣ, ಜಿ-ಬೀದರ್
☎ 08481-252856/9448732456

ಅಕ್ಕನ ಅಮರವಾಣಿ

– ಮಾತಾಜಿ

ಭಾಗ-6

126. ಶರಣಾಗತಿ

ಮಧ್ಯಾಹ್ನದಿಂದ ಮೇಲೆ ಹಿರಿಯರಿಲ್ಲ.
ಅಸ್ತಮಾನದ ಮೇಲೆ ಜಿತೇಂದ್ರಿಯರಿಲ್ಲ.
ವಿಧಿಯ ಮೀರುವ ಅಮರರಿಲ್ಲ.
ಕ್ಷುಧೆ ವಿಧಿ ವ್ಯಸನಕ್ಕಂಜಿ,
ನಾ ನಿಮ್ಮ ಮರೆಹೊಕ್ಕು ಬದುಕಿದೆನು
ಚೆನ್ನಮಲ್ಲಿಕಾರ್ಜುನ ದೇವರ ದೇವಯ್ಯಾ

ಉಪವಾಸ ಮಾಡಬೇಕೆಂಬ ಛಲದೊಡನೆ ಸ್ಪರ್ಧೆಗಿಳಿಯುತ್ತಾರೆ. ಮಧ್ಯಾಹ್ನ ಆಗುತ್ತಿದ್ದಂತೆಯೇ ಹಸಿವು ಗಾಢವಾಗುತ್ತದೆ. ಪ್ರತಿಜ್ಞೆ ಸಡಲುತ್ತದೆ. ಛಲವಂತ ಹಿರಿಯರ ಬಣ್ಣ ಬಯಲಾಗುತ್ತದೆ. ರಾತ್ರಿಯಾಗುತ್ತಲೇ ವಿಷಯಾಸಕ್ತರ ಬಯಕೆಗಳು ಕೆರಳುತ್ತವೆ, ಮನಸ್ಸಿನ ನಿಯಂತ್ರಣ ತಪ್ಪುತ್ತದೆ. ಸಾವನ್ನು ಮೀರುವ ಅಮರರು ಇಲ್ಲ. "ಹಸಿವು, ವ್ಯಸನ ಮತ್ತು ವಿಧಿ(ಸಾವು)ಗೆ ಅಂಜಿ, ಅವನ್ನು ಗೆಲ್ಲಬಯಸಿ ನಾನು ನಿಮ್ಮ ಮರೆಹೊಕ್ಕು ಬದುಕಿದೆನು." ಎನ್ನುತ್ತಾರೆ.ಅಕ್ಕನವರು.

127. ಕಿರುಕುಳ ಬೇಡ

ಕಾಯವಿಕಾರಿಗೆ ಕಾಯಕ್ಕೆ ಮೆಚ್ಚಿದೆ.
ವಾಯದ ಸುಖ ನಿನಗೆ ಮುಂದೆ ನರಕವೆಂದರಿಯೆ.
ದೇವರ ದೇವಂಗೆ ವಂದಿಸಹೋದರೆ ಬಾಯಬಿಡದಿರು.
ಕೈವಿಡಿದು ಸೆಳೆಯದಿರು.
ಚೆನ್ನಮಲ್ಲಿಕಾರ್ಜುನ ದೇವನ ಪಾದಕ್ಕೆರಗುವ
ಭರವೆನಗೆ ಮರುಳೆ.

"ಎಲೈ ರಾಜಾ(ಕೌಶಿಕ). ನೀನು ಕಾಯವಿಕಾರಿ. ನಿನಗೆ ನನ್ನ ಮನದ ಹಂಬಲವಾಗಲಿ ಘನ ಉದ್ದೇಶವಾಗಲಿ ಅರ್ಥವಾಗವು. ಒತ್ತಾಯದಿಂದ ಪಡೆಯುವ ಶಾರೀರಿಕ ಸುಖ ಮುಂದೆ ನಿನಗೆ ನರಕಕ್ಕೆ ಕಾರಣವಾಗುವುದು. ನಾನು ಪೂಜೆಯಲ್ಲಿ ತೊಡಗಿದ್ದೇನೆ. ಬಾಯಿಗೆ ಬಂದಂತೆ ಮಾತನಾಡದಿರು. ನನ್ನ ಕೈವಿಡಿದು ಸೆಳೆದುಕೊಳ್ಳದಿರು. ದೇವರ ಸಾಕಾರವಾದ ಜಂಗಮರ ಪಾದಕ್ಕೆ ವಂದಿಸುವ ಉತ್ಸಾಹ ನನ್ನದು.

128. ಪರಪುರುಷರು ನಮಗಾಗದ ಮೋರೆ

ವಟವೃಕ್ಷದೊಳಡಗಿದ ಸಮರಸ ಬೀಜ
ಭಿನ್ನಭಾವಕ್ಕೆ ಬಪ್ಪುದೆ?
ಕಂಗಳ ನೋಟ, ಕರುವಿಟ್ಟ ಮನದ ಸೊಗಸು-
ಅನಂಗನ ದಾಳಿಯ ಗೆಲಿದವು ಕಾಣಾ.
ಮರೀಚಿಕಾಜಲದೊಳಡಗಿದ ಪ್ರಾಣಿ

ವ್ಯಾಧನ ಬಲೆಗೆ ಸಿಲುಕುವುದೆ?
ನಿನ್ನ ಕೈವಶಕ್ಕೆ ಸಿಕ್ಕಿಹಳೆಂಬುದ ಮರೆಯಾ ಮರುಳೆ.
ಚೆನ್ನಮಲ್ಲಿಕಾರ್ಜುನ ದೇವನಲ್ಲದ ಪುರುಷ
ನಮಗಾಗದ ಮೋರೆ ನೋಡಣ್ಣಾ.

ಆಲದ ಗಿಡದಲ್ಲಿ ಅಡಗಿರುವ ಬೀಜವು ವೃಕ್ಷದಂತೆ ಕೆಲಸ ಮಾಡಲಾರದು. ನನ್ನ ಕಣ್ಣಿನ ನೋಟ ಇಷ್ಟಲಿಂಗದಲ್ಲಿ ನೆಟ್ಟಿದೆ. ಪಕ್ವಗೊಂಡ ಮನಸ್ಸಿನ ಸೊಗಸು ದೇವರಲ್ಲಿ ನೆಟ್ಟಿದೆ. ಹೀಗಾಗಿ ನನ್ನ ನೋಟ ಮನಸ್ಸುಗಳೆರಡು ಕಾಮನ ದಾಳಿಯನ್ನು ಗೆದ್ದಿವೆ. ಮರೀಚಿಕಾ ಜಲದೊಳಗಿರುವ ಪ್ರಾಣಿಗೆ ರೂಪವೇ ಇಲ್ಲ. ಇಂಥದು ಬೇಟೆಗಾರನ ಬಲೆಗೆ ಸಿಕ್ಕುವುದೆ? ನಾನು ನಿನ್ನ ಕೈವಶಕ್ಕೆ ಸಿಕ್ಕುತ್ತೇನೆ ಎಂಬ ಆಸೆಯನ್ನು ಮರೆ ಮರುಳೆ. ಪರಮಾತ್ಮನಲ್ಲದ ಪುರುಷ ನಮಗಾಗದ ಮುಖ, ನಾನು ಕಣ್ಣೆತ್ತಿ ನೋಡಲು ಸಾಧ್ಯವಿಲ್ಲ ನೋಡು ಅಣ್ಣಾ!

ಅಣ್ಣಾ ಎಂದರೆ ಕೌಶಿಕನ ಮನ ಕರಗಿ ಅಕ್ಕನನ್ನು ಕುರಿತು ಪವಿತ್ರ ಭಾವನೆ ಬರಬಹುದೇನೋ ಎಂದು ಅಕ್ಕನವರು 'ನೋಡಣ್ಣಾ' ಎನ್ನುವರು.

129. ಮುತ್ತು ಒಡೆದಡೆ ಬೆಸೆಯಬಹುದೆ?

ಮುತ್ತು ಒಡೆದಡೆ ಬೆಸೆಯಬಹುದೆ?
ಮನ ಮುರಿದಡೆ ಸಂತಕ್ಕೆ ತರಬಹುದೆ?
ಅಪ್ಪುಗೆ ಸಡಲಿದ ಸುಖವ ಮರಳಿ ಅರಸಿದರುಂಟೆ?
ಸಾಧಕನೊಯ್ದ ನಿಧಾನದ ಕುಳಿಯಂತೆ ಅಲ್ಲಿ ಏನುಂಟು?
ಮಚ್ಚು ಪಲ್ಲಟವಾಗಿ, ನೋಟದ ಸುಖವ ಹಿಂಗಿದರೊಳವೆ?
ನೋಡದಿರು, ಕಾಡದಿರು, ಮನವೆಳಸದಿರು.
ಭಾಷೆಗೆ ತಪ್ಪಿದರೆ ಮುಳ್ಳುಮೊನೆಯ ಕಿಚ್ಚಿನಂತೆ.
ಲೇಸು ಬೀಸರವೋಗದ ಮುನ್ನ
ಚೆನ್ನಮಲ್ಲಿಕಾರ್ಜುನನ ದೇವನ ಕೂಡಿ ಧಾತುಗೆಟ್ಟ ಬಳಿಕ ಒಳವೆ?

ಈ ವಚನವು ಸುಸಂಬದ್ಧವಾಗಿ ಅರ್ಥವಾಗದು. ಸಂದರ್ಭಕ್ಕೆ ಅನುಸಾರವಾಗಿ ಬಿಡಿಬಿಡಿಯಾಗಿ ಸಾಲುಗಳನ್ನು ಅರ್ಥಮಾಡಬಹುದು. ಮುತ್ತು ಒಡೆದಡೆ ಬೆಸೆಯಲು ಸಾಧ್ಯವಿಲ್ಲ. ಒಡೆದು ಹೋದ ಮನಸ್ಸುಗಳನ್ನು ಶಾಂತಗೊಳಿಸಲು ಸಾಧ್ಯವಿಲ್ಲ. ಮುಂದಿನ ಮೂರು ಸಾಲುಗಳು ಅರ್ಥವಾಗುತ್ತಿಲ್ಲ. ರಾಜಾ, ನನ್ನನ್ನು ದಿಟ್ಟಿಸಿ ನೋಡಿದಿರು, ಕಾಡದಿರು, ಮನಸ್ಸಿಗೆ ನೋವುಂಟು ಮಾಡದಿರು. ಕೊಟ್ಟ ಭಾಷೆಗೆ ನೀನು ತಪ್ಪಿದರೆ ಮುಳ್ಳಿನಿಂದ ಚುಚ್ಚಿಸಿಕೊಂಡಂತೆ ಆಗುತ್ತದೆ. ನಿನ್ನ ಒಳ್ಳೆಯತನ (ಲೇಸು) ಹಾಳಾಗ (ಬೀಸರವಾಗ)ದಂತೆ. ನಡೆದುಕೊ. ನಾನು ಪರಮಾತ್ಮನನ್ನು ಕೂಡಿ ತುಸು ಧೈರ್ಯ(ಧಾತು)ಗೆಟ್ಟಿದ್ದೇನೆ. ನನ್ನನ್ನು ಕಾಡಬೇಡ.

130. ವಿಷಯದ ಸುಖ ವಿಷವೇ ಸರಿ

ವಿಷಯದ ಸುಖ ವಿಷವೆಂದರಿಯದ ಮರುಳೆ,
ವಿಷಯಕ್ಕೆ ಅಂಗವಿಸದಿರಾ.
ವಿಷಯದಿಂದ ಕೆಡನೆ ರಾವಣನು
ವಿಷಯದಿಂದ ಕೆಡನೆ ದೇವೇಂದ್ರನು?

ವಿಷಯದಿಂದಾರು ಕೆಡರು ಮರುಳೆ?
ವಿಷಯ ನಿರ್ವಿಷಯವಾಯಿತ್ತೆನಗೆ ನಿನ್ನಲ್ಲಿ.
ಚೆನ್ನಮಲ್ಲಿಕಾರ್ಜುನದೇವನ ದೇವಂಗೆ ಒಲಿದವಳ
ನೀನಪ್ಪಿಹೆನೆಂದಡೆ ಒಣಗಿದ ಮರನಪ್ಪುವಂತೆ ಕಾಣಾ.

ಇಷ್ಟವಿಲ್ಲದವರೊಡನೆ ಒತ್ತಾಯ ಪೂರ್ವಕವಾಗಿ ಮಾಡುವ ಲೈಂಗಿಕ ಸುಖವೇ ವಿಷಯ. ಪತಿ- ಪತ್ನಿಯ ಸಂಬಂಧ ಧರ್ಮಸಮ್ಮತ. ಕೌಶಿಕನು ಒತ್ತಾಯಪೂರ್ವಕವಾಗಿ ಮಹಾದೇವಿಯಕ್ಕನನ್ನು ಬಂಧನದಲ್ಲಿಟ್ಟು ವಿಷಯ ಸುಖಕ್ಕೆ ಆಹ್ವಾನಿಸುತ್ತಿದ್ದಾನೆ. ಅವನಿಗೆ ನಿರ್ವಿಷಯಿಯಾದ ಅಕ್ಕನವರು ಬುದ್ಧಿವಾದ ಹೇಳುತ್ತಿದ್ದಾರೆ.

"ಮೂರ್ಖಾ, ವಿಷಯ ಸುಖ ವಿಷವೇ ಸರಿ. ಬಲವಂತವಾದ ವಿಷಯಾಸಕ್ತಿ ಅತ್ಯಾಚಾರವಾಗುವುದಾದ್ದರಿಂದ ಅದಕ್ಕೆ ಪ್ರಯತ್ನಿಸಬೇಡ. ವಿಷಯಾಸಕ್ತ ವರ್ತನೆಯಿಂದ ರಾವಣನು ಸತ್ತ, ಅವನ ಸಾಮ್ರಾಜ್ಯವೇ ನಾಶವಾಯಿತು. ವಿಷಯಾಸಕ್ತಿಯಿಂದ ದೇವೇಂದ್ರನು ಶಾಪಕ್ಕೆ ಒಳಗಾದ, ರೋಗಗ್ರಸ್ತನಾದ. ವಿಷಯದಿಂದ ಯಾರು ತಾನೆ ಕೆಡುವುದಿಲ್ಲ? ನಿನ್ನಲ್ಲಿ ನನಗೆ ಯಾವ ರೀತಿಯಲ್ಲೂ ಪ್ರೇಮವು ಹುಟ್ಟುವುದಿಲ್ಲ. ಪರಮಾತ್ಮನಿಗೆ ಒಲಿದವಳನ್ನು ನೀನು ಬಲವಂತವಾಗಿ ಅಪ್ಪಲು ಯತ್ನಿಸಿದರೆ ಒಣಗಿದ ಮರವೊಂದನ್ನು ಅಪ್ಪಿದಂತಾಗುತ್ತದೆ.

ಅಕ್ಕನವರು ಭಾಷೆಯನ್ನು ತೆಗೆದುಕೊಂಡು ಅರಮನೆಯನ್ನು ಪ್ರವೇಶಿಸಿರುವರಲ್ಲದೆ, ಕೌಶಿಕನಿಗೆ ಸಾಕಷ್ಟು ಬುದ್ಧಿ ಹೇಳಿರುವುದನ್ನು ಕಾಣಬಹುದು.

131. ಅಂತರಂಗದ ಶುದ್ಧಿ ಬಲು ಮುಖ್ಯ

ಕೊಳಲ ದನಿಗೆ ಸರ್ಪ ತಲೆದೂಗಿದಡೇನು;
ಒಳಗಣ ವಿಷದ ಬಯಕೆ ಬಿಡದನ್ನಕ್ಕ?
ಹಾಡಿದಡೇನು, ಕೇಳಿದಡೇನು,
ತನ್ನಲುಳ್ಳ ಅವಗುಣವ ಬಿಡದನ್ನಕ್ಕ?
ಒಳಗನರಿದು ಹೊರಗೆ ಮರೆದವರ
ನೀ ಎನಗೆ ತೋರಯ್ಯಾ ಚೆನ್ನಮಲ್ಲಿಕಾರ್ಜುನದೇವರ ದೇವಾ.

ಸರ್ಪವು ಸಂಗೀತವನ್ನು ಆಲಿಸುತ್ತದೆ. ಪುಂಗಿ, ಕೊಳಲು ಮುಂತಾದ ವಾದ್ಯಗಳ ನಾದವನ್ನು ಕೇಳುತ್ತದೆ ಎಂದು ಹೇಳಲಾಗುವುದು. ಹಾವು ಕೊಳಲಿನ ಮಧುರನಾದಕ್ಕೆ ತಲೆಯನ್ನಲ್ಲಾಡಿಸಿ, ಅದು ಆಸ್ವಾದಿಸುತ್ತದೆ. ಆದರೆ ಅದರೊಳಗೆ ವಿಷ ತುಂಬಿರುತ್ತದೆ. ಇತರರನ್ನು ಕಡಿದು ವಿಷವನ್ನು ಉಣ್ಣಿಸಬೇಕು ಎಂಬ ಹಂಬಲವನ್ನು ಅದರ ಅಂತರಂಗ ಹೊಂದಿರುತ್ತದೆ. ವಚನಗಳನ್ನಾಗಲಿ ಇತರೆ ಧರ್ಮಶಾಸ್ತ್ರಗಳನ್ನಾಗಲಿ ಕೆಲವರು ಹಾಡುತ್ತಾರೆ, ಕೇಳುತ್ತಾರೆ ಆದರೆ ತಮ್ಮೊಳಗಿರುವ ಅವಗುಣವನ್ನು ಬಿಡುವುದಿಲ್ಲ. ಒಳಗನ್ನು ಅರಿದು ಅಂದರೆ ತನ್ನ ಅಂತರಂಗವನ್ನು ಅವಲೋಕಿಸಿಕೊಂಡು ಹೊರಗೆ ಸಹಜ ಸ್ಥಿತಿಯಲ್ಲಿ ಇರುವವರನ್ನು ನನಗೆ ತೋರು ದೇವಾ." ಎಂದು ಅಕ್ಕನವರು ದೇವರಲ್ಲಿ ಪ್ರಾರ್ಥಿಸುತ್ತಾರೆ.

132. ತೊತ್ತುಗೆಲಸ ಮಾಡುವೆ

ಗಂಡ ಮನೆಗೆ ಒಡೆಯನಲ್ಲ;
ಹೆಂಡತಿ ಮನೆಗೆ ಒಡತಿಯೇ? ಒಡತಿಯಲ್ಲ.
ಗಂಡಹೆಂಡಿರ ಸಂಬಂಧವಿಲ್ಲಯ್ಯಾ
ಗಂಡುಗಲಿಯೇ ಚೆನ್ನಮಲ್ಲಿಕಾರ್ಜುನದೇವರ ದೇವಾ
ನೀ ಮನೆಯೊಡೆಯನೆಂದು ನಾ ದುಡಿವೆ ತೊತ್ತಗೆಲಸವನು.

ಇದು ಅರಮನೆಯೇ ಹೊರತು ಗುರುಮನೆಯಲ್ಲ. ಹೀಗಾಗಿ ದೇವರೆಂಬ ಗಂಡ ಈ ಅರಮನೆಗೆ ಒಡೆಯನಲ್ಲ. ನಾನು ಇದರ ಒಡತಿಯೇ, ಖಂಡಿತವಾಗಿಯೂ ಅಲ್ಲ. ಇಲ್ಲಿ ಲೌಕಿಕ ಗಂಡ ಹೆಂಡಿರ ಸಂಬಂಧವೂ ಇಲ್ಲ. ದೇವಾ, ನೀ ಮನೆಯೊಡೆಯನಾದ ಗುರುಮನೆ, ಶರಣರ ಮನೆ ಇದ್ದರೆ ಅಲ್ಲಿ ತೊತ್ತುಗೆಲಸವನ್ನು ಮಾಡಲು ನಾನು ಸಿದ್ಧಳಿರುವೆ.

133. ಕಾಯ ಹೇಗಿದ್ದರೇನು?

ಕಾಯ ಕರ್ರನೆ ಕಂದಿದ್ದಡೇನಯ್ಯಾ?
ಕಾಯ ಮಿರ್ರನೆ ಮಿಂಚಿದಡೇನಯ್ಯಾ?
ಅಂತರಂಗ ಶುದ್ಧವಾದ ಬಳಿಕ
ಚೆನ್ನಮಲ್ಲಿಕಾರ್ಜುನದೇವರ ದೇವಯ್ಯಾ
ನೀನೊಲಿದ ಕಾಯವು ಹೇಗಿದ್ದಡೇನಯ್ಯಾ?

ನನ್ನ ಶರೀರವು ಕಂದಿ, ಕುಂದಿ ಕರ್ರಗಾದರೇನು? ಮಿರಿ ಮಿರಿ ಮಿಂಚುವಂತೆ ಚೆಲುವಾಗಿದ್ದಡೇನು? ಅಂತರಂಗ ಶುದ್ಧಿ ಬಲು ಮುಖ್ಯ ಅದನ್ನು ಸಾಧಿಸಿದ ಮೇಲೆ ದೇವರ ಕೃಪೆಯಾಗುವುದು. ದೇವರ ಕೃಪೆಯಾದ ಮೇಲೆ ದೇವನೊಲಿದ ಶರೀರ ಹೇಗಿದ್ದರೇನಂತೆ!

134. ಸಂಸಾರ ಬಂಧನ ಬಿಡಿಸು

ಪುದುಗಿದ ಸಂಸಾರದ ಬಂಧನದೊಳು ಪೆಣಗಿದೆ
ಅಂದೆಂದಿಗೆ ಬಿಟ್ಟು ಪೋಪುದೊ?
ಎಂದು ನಿಮ್ಮನೊಡಗೂಡಿ
ಬೇರಾಗದೆಂದಿಪ್ಪೆನೊ ಚೆನ್ನಮಲ್ಲಿಕಾರ್ಜುನ ದೇವರ ದೇವಾ?

ಸಂಸಾರವೆಂಬ ಕೆಸರಿನಲ್ಲಿ ಬಂಧಿತಳಾಗಿ ಹೆಣಗುತ್ತಿದ್ದೇನೆ. ಅದೆಂದಿಗೆ ಇದು ಬಿಟ್ಟು ಹೋಗುವುದೋ? ದೇವಾ, ಎಂದು ನಿಮ್ಮನ್ನೊಡಗೂಡಿ ನಿಮ್ಮ ಧ್ಯಾನದಿಂದ ಬೇರಾಗದಂತೆ ನಿಶ್ಚಿಂತಳಾಗಿ ಇರುವೆನೊ!

135. ದೇವಾ, ನೀನೆ ಗತಿಮತಿ

ಆಲಿಸೆನ್ನ ಬಿನ್ನಪವ, ಲಾಲಿಸೆನ್ನ ಬಿನ್ನಪವ, ಪಾಲಿಸೆನ್ನ ಬಿನ್ನಪವ
ಏಕೆನ್ನ ಮೊರೆಯ ಕೇಳೆಯಯ್ಯಾ ತಂದೆ?
ನೋಡೆನ್ನ ದುಃಖವ ನೀನಲ್ಲದೆ ಮತ್ತಿಲ್ಲ ಮತ್ತಿಲ್ಲ.
ನೀನೆ ಎನಗೆ ಗತಿ, ನೀನೆ ಎನಗೆ ಮತಿಯಯ್ಯಾ,

ಚೆನ್ನಮಲ್ಲಿಕಾರ್ಜುನದೇವರ ದೇವಾ.

ಅಕ್ಕನವರು ಅರಮನೆಯಲ್ಲಿ ಬಂಧಿತರಾಗಿ, ಏಕಾಂಗಿಯಾಗಿದ್ದಾರೆ. ಕಷ್ಟಸುಖಗಳನ್ನು ಹಂಚಿಕೊಳ್ಳಲು ಸಂಗಡಿಗರಾರೂ ಇಲ್ಲ. ಸಮಾಧಾನ ಹೇಳುವ ಹಿತೈಷಿಗಳೂ ಇಲ್ಲ. ದೇವರೊಬ್ಬನೆ ಆಪ್ತ ಬಂಧು. ಅದಕ್ಕಾಗಿ ಅವನ ಮುಂದೆಯೇ ತಮ್ಮ ದುಃಖ ತೋಡಿಕೊಳ್ಳುತ್ತಿದ್ದಾರೆ. "ದೇವಾ, ನನ್ನ ವಿನಂತಿಯನ್ನು ಆಲಿಸು, ನನ್ನ ಬಿನ್ನಹ ಕೇಳಿ ಸಂತೈಸಿ, ನನ್ನ ಬೇಡಿಕೆಯನ್ನು ಪೂರೈಸು. ನನ್ನ ಪ್ರಾರ್ಥನೆಯನ್ನು ನೀನೇಕೆ ಆಲಿಸುತ್ತಿಲ್ಲ? ನನ್ನ ದುಃಖವನ್ನು ನೋಡು, ನೀನಲ್ಲದೆ ಬೇರೆ ಯಾರೂ ಇಲ್ಲ. ನೀನೇ ನನಗೆ ಆಶ್ರಯ ನೀನೇ ಎನಗೆ ಬೆಳಕು."

136. ಬ್ರಹ್ಮಾಂಡದೊಡೆಯನ ಪೂಜೆ

ದೃಶ್ಯವಾದ ರವಿಯ ಬೆಳಗು, ಆಕಾಶದ ವಿಸ್ತೀರ್ಣ,
ವಾಯುವಿನ ಚಲನೆ, ತರುಗುಲ್ಮಲತಾದಿಗಳೆಲ್ಲಿಯ ತಳಿರು ಪುಷ್ಪ
ಷಡುವರ್ಣಂಗಳೆಲ್ಲ ಹಗಲಿನ ಪೂಜೆ.
ಚಂದ್ರಪ್ರಕಾಶ ನಕ್ಷತ್ರ ಅಗ್ನಿ ವಿದ್ಯುತಾದಿಗಳು
ದೀಪ್ತಿಮಯವೆನಿಸಿಪ್ಪವೆಲ್ಲ ಇರುಳಿನ ಪೂಜೆ.
ಹಗಲಿರುಳು ನಿಮ್ಮ ಪೂಜೆಯಲ್ಲಿ ಎನ್ನ ಮರೆದಿಪ್ಪೆನಯ್ಯಾ
ಚೆನ್ನಮಲ್ಲಿಕಾರ್ಜುನದೇವರ ದೇವಯ್ಯಾ

ಬ್ರಹ್ಮಾಂಡದೊಡೆಯನ ಪೂಜೆ ಈ ಸೃಷ್ಟಿಯಲ್ಲಿ ಹಗಲಿರುಳು ಎಡಬಿಡದೆ ನಡೆಯುತ್ತಿದೆ. ದೃಶ್ಯವಾದ ರವಿಯ ಬೆಳಗು, ವಿಸ್ತೀರ್ಣವಾದ ಆಕಾಶ, ವಾಯುವಿನ ಚಲನೆ, ಗಿಡಮರ ಬಳ್ಳಿಗಳು ತಳೆದಿರುವ ಪುಷ್ಪಗಳು,. ಸೃಷ್ಟಿಯಲ್ಲಿರುವ ಆರು ಬಣ್ಣಗಳು ಇವೆಲ್ಲವೂ ಹಗಲಿನ ಪೂಜೆ. ಚಂದ್ರನ ಬೆಳದಿಂಗಳು, ನಕ್ಷತ್ರ, ಅಗ್ನಿ, ವಿದ್ಯುತ್ ಮತ್ತು ಬೆಳಕಿನ ವಸ್ತುಗಳೆಲ್ಲ ರಾತ್ರಿಯ ಪೂಜೆ. ಈ ವಿಶ್ವಪೂಜೆಯನ್ನು ನೋಡಿ ಆನಂದಿಸುತ್ತ ದೇವಾ, ನಾನು ಮೈಮರೆದು ಇಪ್ಪೆನಯ್ಯಾ

137. ತೂರ್ಯ ಸಂಭಾಷಣೆ

ಅಪಾರ ಘನಗಂಭೀರದ ವಾರುಧಿಯಲ್ಲಿ
ತಾರಾಪಥವಂ ನೋಡಿ ನಡೆಯೆ,
ಭೈತ್ರದಿಂದ ದ್ವೀಪ ದ್ವೀಪಾಂತರಕ್ಕೆ
ಸಕಲ ಪದಾರ್ಥವನೆಯ್ದಿಸುವದು.
ಎನ್ನ ದೇವ ಚೆನ್ನಮಲ್ಲಿಕಾರ್ಜುನದೇವರ ದೇವನ
ಸಮೀಪ ತೂರ್ಯಸಂಭಾಷಣೆಯನರಿದಡೆ
ಮುನ್ನಿನಲ್ಲಿಗೆಯ್ದಿಸುವುದು.

ವಿಸ್ತಾರವಾದ, ಆಳವಾದ ಸಮುದ್ರದಲ್ಲಿ ಸಾಗುವಾಗ ದಿಕ್ಕುಗಳನ್ನು ಅರಿಯಲು ನಕ್ಷತ್ರಗಳ ಚಲನೆಯನ್ನು ಸಹಾಯಕವಾಗಿ ತೆಗೆದುಕೊಳ್ಳಲಾಗುವುದು. ಧ್ರುವ ನಕ್ಷತ್ರ, ಸಪ್ತರ್ಷಿ ಮಂಡಲ ಇತ್ಯಾದಿಗಳನ್ನು ಗಮನಿಸುತ್ತ ನಾವೆಯನ್ನು ನಡೆಸಲಾಗುವುದು. ಹೀಗೆ ಸಾಗಿದಾಗ

ನಾವೆಯು ಬೇರೆ ಬೇರೆ ದ್ವೀಪಗಳಿಗೆ ಸರಕು, ಸಾಮಗ್ರಿಗಳನ್ನು ತಲುಪಿಸುವುದು. ಅದೇ ರೀತಿ ಪರಮಾತ್ಮನ ಜೊತೆ ನಾವು ಮಾಡುವ ತೂರ್ಯ ಸಂಭಾಷಣೆ ಅಂದರೆ ಆನಂದೋನ್ಮಾದದ ಸ್ಥಿತಿಯಲ್ಲಿ ನಮ್ಮ ಮನಸ್ಸು ಮಾಡುವ ಮಾನಸಿಕ ಸಂವಾದವನ್ನು ಅರಿತರೆ ಅದು ನಮ್ಮನ್ನು ಮುನ್ನಿನಲ್ಲಿಗೆ ಅಂದರೆ ಎಲ್ಲರ ಮೂಲವಾದ ಪರಮಾತ್ಮನಲ್ಲಿಗೆ ತಲುಪಿಸುವುದು.

138. ನಂಬಿದೆ ಗುರುವೆ

ನಂಬಿದೆ ಗುರುವೇ ನಂಬಿದೆ, ನಂಬಿದೆ ಸ್ವಾಮಿ
ನಂಬಿದೆ, ಅಂಬಿಕಾರಮಣ, ನೀನಂಬಿಗ ! ॥ಪಲ್ಲವಿ॥
ಹೊಳೆಯ ಭರವ ನೋಡಂಬಿಗ !
ಸೆಳಹು ಬಹಳ ಕಾಣಂಬಿಗ!
ಸುಳುಹಿನೊಳಗೆ ಬಿದ್ದೆನಂಬಿಗ! ಎನ್ನ
ಸೆಳೆದುಕೊಳ್ಳೋ ನೀನಂಬಿಗ! ॥ ೧ ॥
ಆರು ತೆರೆಯು ನೋಡಂಬಿಗ! ಬಲು
ಮೀರಿ ಬರುತಲಿವೆ ಅಂಬಿಗ!
ಹಾರಲೊದೆದು ಎನ್ನ ತಡಿಗೆ ಸೇರಿಸು, ನೀ
ದೂರಮಾಡದಿರು ಅಂಬಿಗ! ॥ ೨ ॥
ತುಂಬಿದ ಹರುಗೋಲಂಬಿಗ! ಅದ
ಕೊಂಬತ್ತು ಛಿದ್ರ ನೋಡಂಬಿಗ!
ಸಂಭ್ರಮವನು ನೋಡಂಬಿಗ; ಇದ
ರಿಂಬನರಿದು ತೆಗೆಯಂಬಿಗ! ॥ ೩ ॥
ಹತ್ತು ಹತ್ತು ನೋಡಂಬಿಗ!
ಹತ್ತಿದರೈವರು ಅಂಬಿಗ!
ಮುತ್ತಿಗೆಗೊಳಗಾದೆನಂಬಿಗ, ಎನ್ನ
ನೆತ್ತಿಕೊಳ್ಳೋ ನೀನಂಬಿಗ ! ॥ ೪ ॥
ಸತ್ಯವೆಂಬ ಹುಟ್ಟಂಬಿಗ, ಸದ್
ಭಕ್ತಿಯೆಂಬ ಪಥವಂಬಿಗ,
ನಿತ್ಯಮುಕ್ತ ನಮ್ಮ ಚೆನ್ನಮಲ್ಲಿಕಾರ್ಜುನನ
ಮುಕ್ತಿ ಮಂಟಪಕೊಯ್ಯೋ, ಅಂಬಿಗ! ॥ ೫ ॥

ಅಕ್ಕಮಹಾದೇವಿಯವರ ಅತ್ಯಂತ ಜನಪ್ರಿಯವಾದ ಸ್ವರ ವಚನವಿದು. ಇದರ ಪ್ರಭಾವ ಎಷ್ಟೆಂದರೆ ನಂತರ ಬಂದ ಪುರಂದರದಾಸರು ವಚನ ಮುದ್ರಿಕೆಯನ್ನು ಪುರಂದರ ವಿಠಲ ಎಂದು ಬದಲಿಸಿಕೊಂಡು ತಮದಾಗಿಸಿಕೊಂಡು ಹಾಡಿದ್ದಾರೆ. (ಇದು ಕೃತಿಚೌರ್ಯ ವಲ್ಲವೆ?) ಇನ್ನೊಂದು ಸಂತೋಷದ ಸಂಗತಿ ಎಂದರೆ ಅಂಬಿಕಾರಮಣನಾದ ಶಿವನು ಇಲ್ಲಿ (ದೇವರಾಗದೆ) ಗುರುವಾಗಿದ್ದಾನೆ. ಈ ಪದವನ್ನು ಬರೆಯುವಾಗ ಅಕ್ಕನವರಿಗೆ ದೇವರ ಸ್ವರೂಪ ಅರ್ಥವಾಗಿತ್ತು ಎಂದೆನಿಸುತ್ತದೆ.

ಗುರುವೇ ನಾನು ನಂಬಿದ್ದೇನೆ, ನೀನು ನನ್ನ ಒಡೆಯ(ಸ್ವಾಮಿ)
ಅಂಬಿಕಾರಮಣನಾದ ನೀನು ಅಂಬಿಗ ಎಂದು ನಂಬಿದ್ದೇನೆ॥

ಈ ಲೌಕಿಕ ಜೀವನ ಒಂದು ದೊಡ್ಡ ಹೊಳೆ, ದೇಹವೇ ಇದರಲ್ಲಿ ತೇಲುತ್ತಿರುವ ನಾವೆ. ಹೊಳೆಯ ಸೆಳವಿನ ಶಕ್ತಿ ಬಹಳ. ಅದರಲ್ಲೂ 'ಸುಳಿ' ಅತ್ಯಂತ ಶಕ್ತಶಾಲಿ. ಅಂತಹ ಸುಳಿಯಲ್ಲಿ ಬಿದ್ದಿದ್ದೇನೆ. ದಯವಿಟ್ಟು ನನ್ನನ್ನು ಈ ಸುಳಿಯಿಂದ ಹೊರಗೆ ಸೆಳೆದುಕೊ ॥ ೧ ॥

ಬಹುಶಃ ಕೌಶಿಕನ ಅರಮನೆಯಲ್ಲಿ ಬಂಧಿತಳಾಗಿದ್ದಾಗ ಬರೆದ ಗೀತೆ ಇದು ಎನಿಸುತ್ತದೆ. ಕಾಮ,ಕ್ರೋಧ, ಲೋಭ, ಮೋಹ, ಮದ, ಮತ್ಸರ ಎಂಬ ಆರು ತೆರೆಗಳು ಏರಿ ಬಂದು ಬಡಿಯುತ್ತವೆ. ಜೋರಾಗಿ ಒದೆದು ಎನ್ನ ಎಳೆದುಕೊಂಡು ದಂಡೆಗೆ ಸೇರಿಸು. ನನ್ನನ್ನು ದೂರ ಮಾಡಬೇಡ ಅಂಬಿಗಾ. ॥ ೨ ॥

ಈ ನಾವೆಯಲ್ಲಿ ತುಂಬಾ ಸರಕಿದೆ. ಭಕ್ತಿ-ಯುಕ್ತಿ, ವಿವೇಕ-ವೈರಾಗ್ಯ ಇತ್ಯಾದಿ ಸಂಪತ್ತಿದೆ. ಆದರೆ ಇದಕ್ಕೆ ಒಂಬತ್ತು ರಂಧ್ರಗಳಿವೆ. ಇದೇ ಅದರ ದೌರ್ಬಲ್ಯ. ತಾನು ಎಂಥಾ ಪರಿಸ್ಥಿತಿಯಲ್ಲಿ ಇದ್ದೇನೆ ಎಂಬ ಅರಿವಿಲ್ಲದೆ ಈ ದೇಹವೆಂಬ ನಾವೆ ಸಂಭ್ರಮಿಸುತ್ತಿದೆ. ಇದರ ಗುಟ್ಟನ್ನು ಅರಿತು ನನ್ನನ್ನು ಪಾರುಮಾಡು. ॥ ೩ ॥

ಈ ನಾವೆಯಲ್ಲಿ ನೀನು ಗುರುವಾಗಿ ಪ್ರವೇಶಿಸು. ನೀನು ಹತ್ತದಿದ್ದರೆ ಇಲ್ಲಿ ಪಂಚ ವಿಷಯಗಳು ಹತ್ತಿಬಿಡುತ್ತವೆ. ಶಬ್ದ, ಸ್ಪರ್ಶ, ರೂಪ, ರಸ, ಗಂಧ ಎಂಬ ಪಂಚ ವಿಷಯಗಳ ದಾಳಿಯಲ್ಲಿ ನಾನು ಮುತ್ತಿಗೆಗೆ ಒಳಗಾಗುತ್ತಿದ್ದೇನೆ. ಇದರಿಂದ ಪಾರು ಮಾಡಿ ನನ್ನನ್ನು ಎತ್ತಿಕೋ. ॥ ೪ ॥

ಸತ್ಯವನ್ನು ಹುಟ್ಟನ್ನಾಗಿ ಮಾಡಿಕೋ। ಸದ್ಭಕ್ತಿ ಎಂಬ ಪಥದೊಳಗೆ ಸಾಗು. ನಿತ್ಯ ಮುಕ್ತನಾದ ಚನ್ನಮಲ್ಲಿಕಾರ್ಜುನ ದೇವರ ಮುಕ್ತಿ ಮಂಟಪಕ್ಕೆ ನನ್ನನ್ನು ಒಯ್ಯೋ ಅಂಬಿಗಾ॥

(ಮುಂದುವರಿಯುವುದು..)

ಪೂಜ್ಯ ಮಾತಾಜಿಯವರ ಕೆಲವು ಕಾರ್ಯಕ್ರಮಗಳು

ದಿ.24-8-2014 : ಬೆಂಗಳೂರಿನ ಶರಣ.ಇ.ಕೃಷ್ಣಪ್ಪನವರ ಮನೆಯಲ್ಲಿ ಸಾಮೂಹಿಕ ಇಷ್ಟಲಿಂಗಾರ್ಚನೆ ಮತ್ತು ಶರಣ ಸಮಾಗಮ.

ದಿ.26-8-2014 : ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳದಲ್ಲಿ ವಿಶ್ವಧರ್ಮ ಪ್ರವಚನ

ದಿ.27-8-2014 : ಮುದ್ದೇಬಿಹಾಳದಲ್ಲಿ ಪೂಜ್ಯ ಗಂಗಾಮಾತಾಜಿಯವರ ಪ್ರವಚನ ಮುಕ್ತಾಯ

ದಿ.31-8-2014 : ಭಾನುವಾರ ಧಾರವಾಡ ರಾಷ್ಟ್ರೀಯ ಬಸವ ದಳದವರ ಬಸವ ಜ್ಯೋತಿಯ ಸಮಾರೋಪ ಸಮಾರಂಭ ಸಮಯ ಬೆಳಿಗ್ಗೆ 10-30ಕ್ಕೆ

ಸ್ಥಳ : ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ, ಧಾರವಾಡ
ಅಂದು ಸಂಜೆ ಹುಬ್ಬಳ್ಳಿ ರಾಷ್ಟ್ರೀಯ ಬಸವ ದಳದವರ ಬಸವ ಜ್ಯೋತಿಯ ಸಮಾರೋಪ- ಸಂಜೆ 5-30ಕ್ಕೆ

ಸ್ಥಳ : ಬಸವ ಮಂಟಪ, ಶ್ರೀನಗರ, ಉಣಕಲ್, ಹುಬ್ಬಳ್ಳಿ

ದಿ.02-9-2014 : ಮಂಗಳವಾರ, ಬೆಳಗಾವಿ ರಾಷ್ಟ್ರೀಯ ಬಸವ ದಳದವರ ಬಸವ ಜ್ಯೋತಿ ಸಮಾರೋಪ ಸಮಾರಂಭ. ಸಮಯ: ಬೆಳಿಗ್ಗೆ 10-30ಕ್ಕೆ

ಸ್ಥಳ : ಮಹಾಂತನಗರದ ಬಸವ ಮಂಟಪ

ಪರಮ ದಾಸೋಹಿ ಲಿಂಗಾಂಗ ಯೋಗಿಣಿ
ನೀಲಾಂಬಿಕಾ ತಾಯಿ

(೨.೮.೨೦೧೪ ರಂದು ಒದಗಿ ಬಂದ ನೀಲಾಂಬಿಕಾ ಷಷ್ಠಿ ನಿಮಿತ್ತ ವಿಶೇಷ ಲೇಖನ)

– ಸಚ್ಚಿದಾನಂದ ಚಟ್ನಳ್ಳಿ

ಪರಮ ದಾಸೋಹವನು ನೆರೆಮಾಡಿ ಜಂಗಮದ
ಪರಮ ಪ್ರಸಾದವನು ಸವಿದು ಸುಖದಿ
ಕರದಿಷ್ಟಲಿಂಗದೊಳು ಶರೀರವನಿಂಬಿಟ್ಟ
ಕರುಣೆ ನೀಲಮ್ಮ ಶರಣು ಯೋಗಿನಾಥ.

–ಬಸವಯೋಗಿ ಸಿದ್ಧರಾಮೇಶ್ವರರು.

ವಿಶ್ವ ವಿಭೂತಿ, ಜ್ಞಾನಜೋತಿ, ಭಕ್ತಿ ಭಂಡಾರಿ ವಿಶ್ವಗುರು ಬಸವಣ್ಣನವರು ತಮ್ಮ ಸುತ್ತಲಿನ ಸಮಾಜದಲ್ಲಿರುವ ವೈಷಮ್ಯ ಮತ್ತು ಅಸಮಾನತೆಯನ್ನು ತೊಡೆದುಹಾಕಿ ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವ ಹೊಸ ಲಿಂಗಾಯತ ಧರ್ಮವನ್ನು ನೀಡಿ ಹೊಸ ಸಮಾಜವನ್ನು ರಚಿಸುವ ಕಾರ್ಯದಲ್ಲಿ ತೊಡಗಿದಾಗ, ಅಕ್ಕನಾಗಮ್ಮನವರಿಂದ ಲಿಂಗಾಯತ ಧರ್ಮ ದೀಕ್ಷೆಯನ್ನು ಪಡೆದು ಆತ್ಮೋನ್ನತಿಯ ಮಾರ್ಗವನ್ನು ತುಳಿದು ಗುರು ಬಸವಣ್ಣನವರ ವಿಚಾರಪತ್ನಿ (Intellectual Companion)ಯಾಗಿ ಬಾಳಿದವರು ಪರಮ ದಾಸೋಹಿ ಲಿಂಗಾಂಗಯೋಗಿಣಿ ನೀಲಾಂಬಿಕಾ ತಾಯಿ. ನೀಲಲೋಚನೆ, ಗಂಗಾಂಬಿಕೆ, ನೀಲಗಂಗಾ, ನೀಲಗಂಗಾಂಬಿಕೆ, ನೀಲವ್ವ ಎಂದೂ ಇವರನ್ನು ಕರೆಯುತ್ತಿದ್ದರು.

ಬಾಲ್ಯ:

ಕಲಚೂರ್ಯ ಬಿಜ್ಜಳನ ಮಹಾಮಂತ್ರಿ ಬಲದೇವರಸರ ಏಕೈಕ ಪುತ್ರಿ ನೀಲಾಂಬಿಕೆ ಇವರ ತಾಯಿಯ ಹೆಸರು ಮುಕ್ತಾಂಬೆ ಎಂದು ಸಾಹಿತ್ಯದಲ್ಲಿ ಹೇಳಲಾಗಿದೆ. ರಾಜಕೀಯ ಮನೆತನದಲ್ಲಿ ಬೆಳೆದುದರಿಂದ ಧೈರ್ಯ ಸ್ಥೈರ್ಯಗಳು ಸ್ವಾಭಾವಿಕವಾಗಿ ಬೆಳೆದು ಬಂದಿದ್ದವು. ಸಾಹಿತ್ಯ, ಸಂಗೀತ, ಕತ್ತಿವರಸೆಗಳಲ್ಲೂ ಬಲ್ಲಿದರಾಗಿದ್ದರು. ತಂದೆಯ ಪ್ರತಿಯೊಂದು ಕಾರ್ಯದಲ್ಲಿಯೂ ನೆರವಾಗಿ ನಿಲ್ಲುತ್ತಿದ್ದರು.

ಅಂದಿನ ಕಾಲದಲ್ಲಿ ಬಾಲ್ಯ ವಿವಾಹ ಪ್ರಚಲಿತದಲ್ಲಿರುವುದರಿಂದ ಗುರು ಬಸವಣ್ಣನವರು ಎಂಟನೆಯ ವಯಸ್ಸಿಗೆ ಉಪನಯನವನ್ನು ತಿರಸ್ಕರಿಸಿ ಮನೆಬಿಡುವುದಕ್ಕೂ ಮುಂಚೆಯೇ ನೀಲಾಂಬಿಕೆಯವರಿಗೆ ಗುರು ಬಸವಣ್ಣನವರ ಜೊತೆ ವಿವಾಹ ಮಾಡಲಾಗಿತ್ತು ಎಂದು ಭೀಮಕವಿಯ ಬಸವಪುರಾಣದಲ್ಲಿ ಹೇಳಲಾಗಿದೆ. ಈ ವಿಚಾರ ಗುರು ಬಸವಣ್ಣನವರ ಜೀವನದಲ್ಲಿ ಅತ್ಯಂತ ಮಹತ್ವಪೂರ್ಣವಾದ ಸ್ಥಾನವನ್ನು ಪಡೆದುಕೊಳ್ಳುತ್ತದೆ. ಗುರು ಬಸವಣ್ಣನವರ ವಚನಗಳಿಂದ ಅವರ ವ್ಯಕ್ತಿತ್ವವನ್ನು ಗುರುತಿಸುವುದಾದರೆ ಅವರು ಆಳವಾದ ಅಧ್ಯಾತ್ಮ ಜೀವಿಯಾಗಿದ್ದರು ಮತ್ತು ಸ್ವಭಾವತಃ ವೈರಾಗ್ಯ ಮೂರ್ತಿಯಾಗಿದ್ದರು. ಸಾಂಸಾರಿಕ ಜೀವನದಲ್ಲಿ ಆಸಕ್ತಿ ಇಲ್ಲದವರಾಗಿದ್ದರು. ಆದರೆ ಅವರ ಮನಸ್ಸು ಪ್ರೌಢಾವಸ್ಥೆಗೆ ಬರುವ ಮೊದಲೇ ಬಾಲ್ಯ ವಿವಾಹ ನಡೆದು ಹೋಗಿದ್ದರಿಂದ ಒಬ್ಬ ಸ್ತ್ರೀಯ ಜೀವನಕ್ಕೆ ತೊಂದರೆ

ಯಾಗುತ್ತದೆ ಎನ್ನುವ ಕಾರಣಕ್ಕೆ ಪ್ರೌಢಾವಸ್ಥೆಗೆ ಬಂದಾಗ ಸಂಸಾರ ಜೀವನದಲ್ಲಿ ಕಾಲಿಟ್ಟರು ಎನಿಸುತ್ತದೆ.

ತಾಯಿ ನೀಲಾಂಬಿಕೆಯವರ ಸಮಗ್ರ ವ್ಯಕ್ತಿತ್ವವನ್ನು ಚೆನ್ನವೀರ ಕಣವಿಯವರು ಹೀಗೆ ಕೊಂಡಾಡುತ್ತಾರೆ.

ಸದುವಿನಯದ ತುಂಬಿದ ಕೊಡ ತಂದಳು ನೀಲಾಂಬಿಕೆ
ಕಲ್ಯಾಣದ ಅಂಗಳದಲ್ಲಿ ತಳಿ ಹೊಡೆದರು ಚೆಂದಕೆ
ಸಮಚಿತ್ತದ ರಂಗೋಲಿಯು ಒಳಹೊರಗೂ ಧೂಪವವು
ಹಾದಾಡುವ ಹೊಸ್ತಿಲಲಿ ಹೊಯ್ದಾಡದ ದೀಪವು

ಮಹಾಮನೆಯ ಮಹಾತಾಯಿ ಮಾಸದ ಮಡಿ ಹಾಸಲು
ದಾಸೋಹಕೆ ಮೀಸಲಾದ ತೃಪ್ತಿಯ ನಗೆ ಸೂಸಲು
ಎಲ್ಲೆಲ್ಲಿಯ ಗಣತಿಂಥಿಣಿ ತಣಿದು ಹಾಡಿ ಹರಸಲು
ಭಕ್ತಿಯ ಭಾಂಡಾರ ತುಂಬಿ ಹರಡಿತು ಬೆಳುದಿಂಗಳು

ಅಯ್ಯನ ಕೈನೋವು ಎನಲು ಆಭರಣವ ಕೊಟ್ಟಳು
ಅನುಭಾವದ ಅಲಂಕಾರ ಆಚರಣೆಯ ತೊಟ್ಟಳು
ನೆರಳಾದಳು ಬಸವಣ್ಣನ ಹರಳಾದಳು ಬೆರಳಿಗೆ
ಅರಳಾದಳು ಲಿಂಗದಲ್ಲಿ ಪರಿಮಳಿಸುತ ಪೂಜೆಗೆ

ಏನೂ ನೋವು ಹೇಳಲಿಲ್ಲ ಕೇಳಲಿಲ್ಲ ಮಡದಿಗೆ
ಹಾಗೆ ಹೊರಟು ಹೋದರಣ್ಣಾ ಕಲ್ಯಾಣದಿಂದ ಹುಡದಿಗೆ
ಕೂಡಲದಲ್ಲಿ ನೀರು ಹರಿದು ತಿಳಿಗೊಂಡಿತು ನೋಡಿರೆ
ನೀಲಾಂಬಿಕೆ ನೆನಪಾದಳು ಬೇಗನೆ ಕರೆತನ್ನರೆ

ಕರಸ್ಥಲದ ಬಸವರೂಪು ಪರಿಣಾಮವ ಮೀರಿಸಿ
ಬಸವಯ್ಯನು ಮಾಡಿದಾಟ ಲಿಂಗದೆಡೆಗೆ ತೋರಿಸಿ
ಅಲ್ಲಿ ಇಲ್ಲಿ ಉಭಯವಳಿದು ಅಂಗೈಯಲ್ಲಿ ಸಂಗಮ
ಅಲ್ಲಿದ್ದವರೂ ಇಲ್ಲಿಲ್ಲವೇ ಜಗದಜೀವ ಜಂಗಮ.

ನೀಲಾಂಬೆಯ ನಿಲುವಿನಲ್ಲಿ ಮಹಾಲಿಂಗ ಹೊಳೆಯಲು
ಬಸವಣ್ಣನ ಭಕ್ತಿ ಕಳಶ ಸಂಗಮನಡಿ ತೊಳೆಯಲು
ಗಾಳಿಯಾಗಿ ಗಾಳಿಯಾಗಿ ಮಹಾಬೆಳಕು ಸಂದಿತು
ಪ್ರಾಣಲಿಂಗದಲ್ಲಿ ಕರಗಿ ನೀಲಾಂಬರ ಮಿಂಚಿತು.

ವ್ಯಕ್ತಿತ್ವ:

ವಿದ್ಯೆ, ವಿನಯ ಮತ್ತು ಸುಸಂಸ್ಕೃತಿಗಳ ತ್ರಿವೇಣಿ ಸಂಗಮವಾಗಿದ್ದ ನೀಲಲೋಚನೆಯವರು ಗುರುಬಸವಣ್ಣನವರ ಭಕ್ತಿ, ಆತ್ಮಶಕ್ತಿ ಮತ್ತು ಮೃದು ಹೃದಯಕ್ಕೆ ಮಾರುಹೋಗಿ

ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡರು. ಮಂತ್ರಿಯ ಏಕ ಮಾತ್ರ ಪುತ್ರಿಯಾಗಿ ಸುಖದ ಸುಪ್ಪತಿಗೆಯಲ್ಲಿ ಬೆಳೆದರೂ ಗುರು ಬಸವಣ್ಣನವರ ವ್ಯಕ್ತಿತ್ವಕ್ಕೆ ಮಾರುಹೋಗಿ ಸರಳ ಜೀವನವನ್ನೇ ತಮ್ಮದಾಗಿಸಿಕೊಂಡರು.

ನಿತ್ಯವೂ ಬಸವ ಮಹಾಮನೆಯಲ್ಲಿ ಲಕ್ಷದಮೇಲೆ ತೊಂಬತ್ತಾರು ಸಾವಿರ ಶರಣರಿಗೆ ನಡೆಯುವ ದಾಸೋಹದ ಕಾರ್ಯಭಾರ ಹಾಗು ಮೇಲ್ವಿಚಾರಣೆಯನ್ನು ನೀಲಾಂಬಿಕೆ ತಾಯಿಯವರು ವಹಿಸಿಕೊಂಡರು. ಮಹಾಮನೆಯ ದಾಸೋಹಕಾರ್ಯದ ಜೊತೆಗೆ ಅನುಭವ ಮಂಟಪದ ಜ್ಞಾನ ದಾಸೋಹ ಕಾರ್ಯಗಳಲ್ಲಿ ತನು-ಮನ-ಧನಗಳನ್ನು ಸವೆಸುತ್ತಿದ್ದರು. ಮಹಾಮನೆಗೆ ಬರುವ ಅತಿಥಿಗಳ ಸತ್ಕಾರ, ಅನುಭವ ಮಂಟಪದ ಕಾರ್ಯಕ್ರಮಗಳ ಸಿದ್ಧತೆ ಎಲ್ಲದರಲ್ಲೂ ಸಹಭಾಗಿಯಾಗುತ್ತಿದ್ದರು. ಪತಿಯ ಮನದಿಚ್ಛೆಯನ್ನರಿತು ಕಾರ್ಯಗೈವ ಮುತ್ಸದ್ದಿತನ ನೀಲಾಂಬಿಕೆ ಯವರಲ್ಲಿತ್ತು. ಅವರು ತಮ್ಮ ಆತ್ಮಶಕ್ತಿಯ ಬಲದಿಂದ ಗುರುಬಸವಣ್ಣನವರ ಜಂಗಮ ಪ್ರೇಮಕ್ಕೆ ಆಧಾರವಾಗಿದ್ದರು. ಲಾಂಛನಕ್ಕೆ ಶರಣೆಂದು ಬೇಡಿದವರ್ಗೆ ಇಲ್ಲೆನ್ನದೀವುತ್ತ, ಕಳ್ಳನಲ್ಲಿಯೂ ಲಿಂಗದೇವನ ಕಾಣುವ ಅನುಭಾವಿ ಗುರು ಬಸವಣ್ಣನವರಂಥ ಮಹಾಮಹಿಮರ ಪತ್ನಿಯಾಗಿ ಅವರ ಮನದಿಚ್ಛೆಯಂತೆ ಕಾರ್ಯಗೈವ ಕಾಯಕ ಸುಲಭದ್ದಾಗಿರಲಿಲ್ಲ. ಆದರೆ ತಾಯಿ ನೀಲಾಂಬಿಕೆಯವರು ಲಿಂಗದೇವ ಭಕ್ತಿ ಮತು ಪತಿಭಕ್ತಿಯ ಬಲದಿಂದ ಆದರ್ಶ ಪತ್ನಿಯಾದರು, ಮಹಾಮನೆಯ ಮಹಾತಾಯಿ ಎಂದು ಪ್ರಸಿದ್ಧಿ ಪಡೆದರು.

ಲಕ್ಕಣ್ಣ ದಂಡೇಶ ಶಿವ ತತ್ವ ಚಿಂತಾಮಣಿಯಲ್ಲಿ ನೀಲಾಂಬಿಕೆಯವರ ಬಗ್ಗೆ ಹೀಗೆ ಬರೆಯುತ್ತಾನೆ.

ಮುನಿಕಶ್ಯಪಂಗದಿತಿ ಸಾವಿತ್ರಿ ಸತ್ಯಪಂ
ಗನಸೂಯೆ ಅತ್ರಿಗೆ ವಸಿಷ್ಠಂಗರುಂಧತಿಯು
ಜನಕ ವಂಶದಲಿ ಲೋಪಾಮುದ್ರೆ ಕುಂಭಜಗೆ ಸೇರಿ ಪತಿಗಳ ಸೇವೆಯ
ವಿನಯದಿಂ ಮಾಳ್ಪಂತೆ ಗಂಗಾಂಬಿಕೆಯು ತನು
ಮನವನೊಚ್ಚತಗೊಟ್ಟು ಬಸವರಾಜನ ಚಿತ್ತ
ದನುಗುಣದ ಸತಿಯಾದಳೆಂದು ಕೊಂಡಾಡುವವರ
ಚರಣಾಂಬುಜಕ್ಕೆ ಶರಣು.

ಮಹಾಮನೆಗೆ ಸತತವಾಗಿ ಬರುವ ಶರಣ ಸಮುದಾಯದ ಮಧ್ಯದಲ್ಲೂ ತ್ರಿಕಾಲ ಲಿಂಗಾರ್ಚನೆ ಮಾಡುತ್ತ ಲಿಂಗಾಂಗಯೋಗಿಣಿಯಾಗಿ ಅಪ್ರತಿಮವಾದ ಸಿದ್ಧಿಯನ್ನು ಪಡೆದು ಕೊಂಡರು. ಜೊತೆಗೆ ಅನುಭವ ಮಂಟಪಕ್ಕೆ ಆಗಮಿಸುವ ಅಸಂಖ್ಯಾತ ಸಾಧಕರಿಗೆ ಮಾರ್ಗದರ್ಶನ ಮಾಡುವ ಗುರುವಾದರು ಮಹಾ ತಾಯಿಯಾದರು. ಅದಕ್ಕಾಗಿಯೇ ಅಕ್ಕಮಹಾದೇವಿಯವರನ್ನು "ಅವ್ವೆ ನೀಲಾಂಬಿಕೆಯ ಮೋಹದ ಮಗಳು" ಎಂದು ಕರೆಯುತ್ತಾರೆ.

ಹೆತ್ತವ್ವೆ ನೀಲಮ್ಮ ಮುತ್ತವ್ವೆ ಮಹಾದೇವಿ
ಎತಿ ಸಲಹಿದಳಕ್ಕ ನಾಗಲೆಯು ತಾಯಿ
ಇತ್ತ ಬಾರೆಂದು ತಾಂಬೂಲ ಪ್ರಸಾದವಿತ್ತ
ಮುಕ್ತಾಯಕ್ಕಗೆ ಶರಣು ಯೋಗಿನಾಥ.

ತಾಯೆ, ಪರಮ ಸುಖಾಚಾರದ ಮೂರ್ತಿಯನಡಗಿಸಿ ನೀನೆಯಾದೆಯವ್ವಾ.
ತಾಯೆ, ಮಹಾಜ್ಞಾನಕಲ್ಪಿತದಲ್ಲಿ ನೀನೆಯಡಗಿದೆಯವ್ವಾ.
ತಾಯೆ, ನೀಲಮ್ಮನೆಂಬ ಸುಖವಾಸಮೂರ್ತಿ,
ಕಪಿಲಸಿದ್ಧಮಲ್ಲಿನಾಥಯ್ಯಾ, ನಮ್ಮ ತಾಯೆ ನೀಲಮ್ಮನಾದಳು.

ಹೆತ್ತವ್ವೆ, ಎನ್ನ ತಾಯಿ ಎಂದು ಗುರು ಸಿದ್ಧರಾಮೇಶ್ವರರು ಗೌರವಿಸುತ್ತಾರೆ. ಅವರ ಚರಣಕ್ಕೆ ಶರಣೆಂದು ಧನ್ಯರಾಗುತ್ತಾರೆ.

ಎಮ್ಮಪ್ಪ ಬಸವಣ್ಣ ಎಮ್ಮವ್ವೆ ನೀಲಮ್ಮ
ಎಮ್ಮಯ್ಯ ಪ್ರಭುರಾಯ ಚೆನ್ನಬಸವ
ಇನ್ನುಳಿದ ಶರಣರ ಚರಣಕ್ಕೆ ಶರಣೆಂದು
ಧನ್ಯನಾದೆನು ಗುರುವೆ ಯೋಗಿನಾಥ

ಈ ಎಲ್ಲಾ ಕಾರ್ಯಗಳ ಮಧ್ಯೆಯೂ ತಮ್ಮ ಅನುಭಾವವನ್ನು ವಚನಗಳ ರಚನೆಯಲ್ಲಿ ಚೆಲ್ಲವರಿದಿದ್ದಾರೆ. "ನೀಲಮ್ಮನ ವಚನ ಲಕ್ಷದ ಹನ್ನೊಂದು ಸಾಸಿರ." ಎನ್ನುವ ಗುರು ಸಿದ್ಧರಾಮೇಶ್ವರರ ವಾಣಿಯನ್ನು ಕೇಳಿದರೆ ನಮಗೆ ತಾಯಿ ನೀಲಾಂಬಿಕೆಯವರ ಚಲನಶೀಲ ವ್ಯಕ್ತಿತ್ವ ಅಗಾಧವೆನಿಸುತ್ತದೆ.

ಅವರ ಸಹನಶೀಲತೆ, ಶಾಂತ ಸ್ವಭಾವ, ಉದಾರ ಹೃದಯ, ಅಂತಃಕರುಣೆಯಿಂದ ತುಂಬಿದ ಭಕ್ತಿ ಭಾವ ಭರಿತ ಪ್ರಶಾಂತವಾದ ಮುಖವನ್ನು ಕಂಡವರೆಲ್ಲರೂ ಅವರ ವ್ಯಕ್ತಿತ್ವದ ಘನತೆಗೆ ಶಿರಬಾಗಿ ನಮಿಸುತ್ತಿದ್ದರು. ಅವರ ಪಾದದ ಪಾದುಕೆಯ ಧೂಳಾದರೂ ನನ್ನ ಪುಣ್ಯ ಎಂದು ಅನೇಕ ಮಹಾಮಹಿಮರೂ ಭಾವಿಸಿದ್ದರು.

ಜ್ಞಾನಕ್ರಿಯಾದಿಗಳಿಂದ ಲಿಂಗದಲ್ಲಿ ನಿಬ್ಬೆರಗಾದ ನೀಲಮ್ಮನ
ಪಾದದ ಕಂದ ನಾನು, ಪಾದದ ದಾಸ ನಾನು,
ಪಾದದ ಪಾದುಕೆ ನಾನು, ಪಾದುಕೆಯ ಧೂಳಿ ನಾನು,
ಕಪಿಲಸಿದ್ಧಮಲ್ಲಿಕಾರ್ಜುನ.

ಅಲ್ಲಮ ಪ್ರಭುಗಳನ್ನು ಮೊದಲಿಗೆ ಕಂಡಾಗ ಅಬ್ಬರಿಸಿದ ಗುರು ಸಿದ್ಧರಾಮೇಶ್ವರರು ನೀಲಮ್ಮ ತಾಯಿಯವರ ಶ್ರೀ ಚರಣದಲ್ಲಿ ಕರಗುವುದನ್ನು ನೋಡಿದರೆ ಆ ಮಹಾ ತಾಯಿಯ ನಿಲುವು ನಮ್ಮ ಕಲ್ಪನೆಗೂ ಮಿಗಿಲು ಎಂದೆನಿಸುತ್ತದೆ.

ಸಾಧನೆ:

ಹನ್ನೆರಡನೇ ಶತಮಾನದ ಶರಣರಲ್ಲಿ ಕೆಲವೇ ಕೆಲವರು ಇಚ್ಛಾಮರಣತ್ವದ ಸಿದ್ಧಿಯನ್ನು ಸಾಧಿಸಿದವರಾಗಿದ್ದರು. ಅವರಲ್ಲಿ ತಾಯಿ ನೀಲಾಂಬಿಕೆಯವರೂ ಇಚ್ಛಾಮರಣ ಶಕ್ತಿಯುಳ್ಳವ ರಾಗಿದ್ದರು. ಭಾವಲಿಂಗೈಕ್ಯ ಸ್ಥಿತಿಯನ್ನು ಪಡೆದುಕೊಂಡವರಾಗಿದ್ದರು.

ಅಂಗದ ಸಂಗವ ಹಿಂಗಿ ಅಂಗವನಳಿದೆನಯ್ಯ.
ಆ ಅಂಗವನಳಿದ ಬಳಿಕ
ಅಣೋರಣೀಯಾನ್ ಮಹತೋಮಹೀಯಾನ್‌ಯೆಂಬ ಶಬ್ದವಡಗಿತ್ತು.
ಮನವನರಿದು, ಆ ಮನ ಘನವ ತಿಳಿದು,
ಆನು ಬದುಕಿದೆನಯ್ಯ, ಆನು ಸುಖಿಯಾದೆನಯ್ಯ.
ಆನು ಇಹಪರದ ಹಂಗಹರಿದು,
ಸುಖ ವಿಸುಖ ಪ್ರಸನ್ನರೂಪಾಯಿತ್ತಯ್ಯ ಸಂಗಯ್ಯ.

ಅಂಗಗುಣಗಳನ್ನಳಿದುಕೊಂದು ಲಿಂಗವೇ ತಾವಾದ ಬಳಿಕ ಸುಖಿಯಾದೆನೆಂದು ಹೇಳುತ್ತಾರೆ.

ಮೂರಳಿದು, ಮೂರ್ತಿಯ ಕಳೆದು,
ಅನಿಮಿಷಯೋಗ ವಿಚಾರವನನುಭವಿಸಿ,

ವಿಚಾರವನಂಗವನಂಗೈಸಿದಂಗವನಂಗದಲ್ಲಿಯೆ
ಅಡಗಿ ನಿಂದೆನಯ್ಯ ಸಂಗಯ್ಯ.

ಅನಿಮಿಷ ದೃಷ್ಟಿಯಿಂದ ಇಷ್ಟಲಿಂಗಯೋಗ ಮಾಡುತ್ತ ಸ್ಥೂಲ, ಸೂಕ್ಷ್ಮ, ಕಾರಣ ಶರೀರ ವೆಂಬ ಮೂರಳಿದು, ಭಾವ ಲಿಂಗೈಕ್ಯಸ್ಥಿತಿಯನ್ನು ಪಡೆದುಕೊಂಡಿರುವ ತಮ್ಮ ಅನುಭವವನ್ನು ಮೇಲಿನ ವಚನದಲ್ಲಿ ಹೇಳುತ್ತಾರೆ. "ಪಶ್ಚಿಮ ಚಕ್ರವಿಡಿದು ಪರಮನಾದಳು ಲಿಂಗದೇವನ ಮರುಳು ಮಗಳು ನೀಲಲೋಚನೆ, ಚೆನ್ನಬಸವಣ್ಣಾ!" ಎಂದು ಗುರುಬಸವಣ್ಣನವರೇ ಹೇಳುವರು.ತಮ್ಮ ದೇಹದ ಎಲ್ಲಾ ಚಕ್ರಗಳನ್ನು ಜಾಗ್ರತಮಾಡಿಕೊಂಡು ಇಚ್ಛಾಮರಣ ಶಕ್ತಿಯನ್ನು ಗಳಿಸಿಕೊಂಡು ಸಾಧನೆಯ ತುಟ್ಟ ತುದಿಯನ್ನು ತಲುಪಿದ್ದರು ಎನ್ನುವುದು ಮನದಟ್ಟಾಗುತ್ತದೆ.

ಲಿಂಗವಾದಡೆ ಚೆನ್ನಬಸವಣ್ಣನಂತಾಗಬೇಕು.
ವೀರನಾದಡೆ ಮಡಿವಾಳಯ್ಯನಂತಾಗಬೇಕು.
ನಿಗ್ರಹಿಯಾದರೆ ಹೊಡೆಹುಲ್ಲ ಬಂಕಯ್ಯನಂತಾಗಬೇಕು
ಧೀರನಾದಡೆ ಘಟ್ಟಿವಾಳಯ್ಯನಂತಾಗಬೇಕು.
ಲಿಂಗದಲ್ಲಿ ನಿರ್ವಯಲಾದರೆ ನೀಲಲೋಚನೆಯಮ್ಮನಂತಾಗಬೇಕಯ್ಯ.
ಈ ಐವರ ಕಾರುಣ್ಯ ಪ್ರಸಾದವ ಕೊಂಡು ಬದುಕಿದೆನಯ್ಯಾ
ಕಪಿಲಸಿದ್ಧ ಮಲ್ಲಿಕಾರ್ಜುನದೇವರ ದೇವಾ.

ಎಂದು ನೀಲಾಂಬಿಕೆಯವರು ಲಿಂಗದಲ್ಲಿ ಪಡೆದ ನಿರ್ವಯಲ ಪದವಿಯನ್ನು ಕುರಿತು ಗುರು ಸಿದ್ಧರಾಮೇಶ್ವರರು ಕೊಂಡಾಡುತ್ತಾರೆ.

ಪತಿಯ ಜೊತೆ ಬಾಂಧವ್ಯ:

ಮದುವೆಯಾದ ಹೊಸದರಲ್ಲಿ ಪತಿ-ಪತ್ನಿಯಂತೆ ಇದ್ದು, ಬಾಲ ಸಂಗಯ್ಯನೆಂಬ ಮಗನನ್ನು ಪಡೆದರು. ನಂತರ ಬಾಲ ಸಂಗಯ್ಯನವರು ಕೆಲವು ವರ್ಷಗಳಲ್ಲೇ ಲಿಂಗೈಕ್ಯರಾದರೆಂದು ತೋರುತ್ತದೆ. ಅದಾದ ನಂತರ ಅವರು ಪತಿ ಪತ್ನಿ ಎಂಬ ಭಾವವಳಿದು ಗುರು-ಶಿಷ್ಯೆ ಎಂಬ ಭಾವವಳವಡಿಸಿಕೊಳ್ಳುತ್ತಾರೆ.

ಆದಿ ಅನಾದಿಯ ತತ್ವವ ಭೇದಿಸಿಕೊಟ್ಟ ಗುರುವೆ,
ಅಪ್ರಮಾಣದ ಬೆಳಗ ಭೇದಿಸಿಕೊಟ್ಟ ಗುರುವೆ,
ಅಕಾರ ಉಕಾರ ಮಕಾರ ಕಳೆಯನರುಹಿಸಿಕೊಟ್ಟ ಗುರುವೆ,
ಇಷ್ಟ ಪ್ರಾಣ ಭಾವವಿದೆಂದು ತೋರಿದ ಗುರುವೆ,
ನಿಜದರಿವನರುಹಿಸಿಕೊಟ್ಟ ಗುರುವೆ,
ನಿರ್ಮಳಪ್ರಭೆಯ ತೋರಿದ ಗುರುವೆ,
ನಿಜವನನುಭವಕ್ಕೆ ತಂದ ಗುರುವೆ
ನಿಮ್ಮ ಘನವ ಕಾಂಬ ಕಣ್ಣು ಕ್ರಮಗೆಟ್ಟಿತ್ತು ಸಂಗಯ್ಯಾ.
ಬಸವಯ್ಯನ ಪ್ರಭೆ ಎಲ್ಲಿ ಅಡಗಿತೊ !

ಗುರು ಬಸವಣ್ಣನವರನ್ನು ನೀಲಾಂಬಿಕೆಯವರು ಕೇವಲ ಪತಿ ಎಂದು ಭಾವಿಸದೇ ಗುರು ಎಂದು ಭಾವಿಸಿದ್ದರು.

ಮಡದಿ ಎನಲಾಗದು ಬಸವಂಗೆ ಎನ್ನನು.
ಪುರುಷನೆನಲಾಗದು ಬಸವನ ಎನಗೆ.
ಉಭಯದ ಕುಳವ ಹರಿದು ಬಸವಂಗೆ ಶಿಶುವಾನಾದೆನು,

ಬಸವನೆನ್ನ ಶಿಶುವಾದನು. ಪ್ರಮಥರು ಪುರಾತರು ಸಾಕ್ಷಿಯಾಗಿ
ಸಂಗಯ್ಯನಿಕ್ಕಿದ ದಿಬ್ಬವ ಮೀರದೆ ಬಸವನೊಳಗಾನಡಗಿದೆ.

ಮಡದಿ-ಪುರುಷ ಎಂಬ ಉಭಯ ಭಾವವನ್ನು ಹರಿದು ತಂದೆ ಮಗಳು, ತಾಯಿ ಮಗ ಎಂಬ ಭಾವನೆಯಳಡಿಸಿಕೊಂಡಿದ್ದರು. ನಿಜವಾಗಿಯೂ ಇದು ಅದ್ಭುತವಾದ ಸಾಧನೆ. ಲಿಂಗಾಯತ ಧರ್ಮದಲ್ಲಿ ದಾಂಪತ್ಯ ಜೀವನದ ಸಾರವೇ ಇದಾಗಿದೆ. ಪ್ರತಿಯೊಬ್ಬ ಲಿಂಗಾಯತ ಧರ್ಮಿಯೂ ಒಂದು ಹಂತದಲ್ಲಿ ಈ ಭಾವವನ್ನು ಅಳವಡಿಸಿಕೊಳ್ಳಬೇಕು. ಪತಿ-ಪತ್ನಿಯರಿಬ್ಬರೂ ದೇವರಿಗೆ ಸತಿಯಾಗಿ ಇಬ್ಬರೂ ಶರಣ ಸತಿ ಲಿಂಗ ಪತಿ ಭಾವವನ್ನು ಅಳವಡಿಸಿಕೊಳ್ಳಬೇಕು. ಈ ವಿಚಾರವನ್ನು ಪರೋಕ್ಷವಾಗಿ ಸಂದೇಶ ನೀಡುತ್ತಾರೆ.

ಸಂದೇಶ:

ಆಗಿಂಗೆ ಮುಯ್ಯಾನದಿರು, ಚೇಗಿಂಗೆ ಬೆಂಬೀಳದಿರು,
ಆಹಾ ಮನವೆ, ಸಂತೈಸಿಕೊ ನಿನ್ನ ನೀನೆ.
ಆಗೆಂದಡೆ ನಿನ್ನ ವಶವಲ್ಲ, ಹೋಗೆಂದಡೆ ನಿನ್ನಿಚ್ಛೆಯಲ್ಲ,
ಭೋಗಾದಿಭೋಗಂಗಳೆಲ್ಲವು ಸಂಗಯ್ಯನಧೀನವಾಗಿ.

ಬಹುಶಃ ಈ ವಚನವನ್ನು ಬಾಲಸಂಗಯ್ಯನವರು ಲಿಂಗೈಕ್ಯರಾದಾಗ ಬರೆದಂತೆ ತೋರುತ್ತದೆ. ನಮ್ಮ ಜೀವನದಲ್ಲಿ ಬರುವ ಸುಖ-ದುಃಖ, ನೋವು-ನಲಿವು, ಆಪತ್ತು-ವಿಪತ್ತುಗಳೆಲ್ಲವೂ ಲಿಂಗದೇವರ ಅಧೀನದಲ್ಲಿರುತ್ತವೆ ಅದಕ್ಕಾಗಿ ನಾವು ವಿಹ್ವಲಗೊಳ್ಳಬಾರದು ಎನ್ನುವುದೇ ಈ ವಚನದ ಸಂದೇಶವಾಗಿದೆ.

ಎಲೆ ಶರಣರಿರಾ, ಎಲೆ ಭಕ್ತರಿರಾ,
ಭಕ್ತಿಕಾಂಡದ ಮೂಲಿಗನ ಕಾಣಿರೆ ಬಸವನ ?
ಆ ಭಕ್ತಿಯಸಂಗದ ಐಕ್ಯನ ಕಾಣಿರೆ ಬಸವನ ?
ಭಕ್ತಿಯ ನಿಜಸಮಾಧಿಯ ಸುಖವ ಕರುಣಿಸುವ ಅಯ್ಯ ಬಸವನ,
ಸಂಗಯ್ಯನ ಪ್ರಸಾದಿಯಾದ ಬಸವನ ಕಾಣಿರೆ ಭಕ್ತರು ?

ಗುರು ಬಸವಣ್ಣನವರು ವೈಚಾರಿಕವಾದ ಭಕ್ತಿ ಪರಂಪರೆಯ ಮೂಲಿಗರಾಗಿದ್ದಾರೆ. ಅವರನ್ನು ನಂಬಿ ಭಕ್ತಿಯ ನಿಜ ಸುಖವನ್ನು ಅನುಭವಿಸಿರಿ. ಗುರು ಬಸವಣ್ಣನವರು ಪರಮಾತ್ಮನು ಈ ಜಗತ್ತಿಗೆ ನೀಡಿದ ಪ್ರಸಾದ ಅವರನ್ನು ಭಕ್ತಿಯಿಂದ ಸ್ವೀಕರಿಸಿ ಎನ್ನುತ್ತಾರೆ.

ಆತ್ಮ ಕಥನದಂತಿರುವ ವಚನಗಳು ಅವರು ಜೀವಿಸಿದ ಬಗೆ, ಸಂದಿಗ್ಧ ಪರಿಸ್ಥಿತಿಯಲ್ಲಿ ಅವರು ನಡೆದುಕೊಂಡ ರೀತಿ, ತೆಗೆದುಕೊಂಡ ನಿರ್ಣಯಗಳ ಬಗ್ಗೆ ತಿಳಿಸುತ್ತವೆ. ಹೀಗಾಗಿ ಅವರ ಎಲ್ಲಾ ವಚನಗಳು ಒಂದಿಲ್ಲ ಒಂದು ಸಂದೇಶವನ್ನು ಕೊಡುತ್ತವೆ.

ಲಿಂಗೈಕ್ಯ:

ಗಡಿಪಾರಿನ ಆಜ್ಞೆ ಹೊತ್ತು ಗುರು ಬಸವಣ್ಣನವರು ಕೂಡಲ ಸಂಗಮದಲ್ಲಿ ತಪೋಮಗ್ನರಾಗುತ್ತಾರೆ. ಲಿಂಗದೇವನಿಂದ ತನ್ನಲ್ಲಿ ಒಡವೆರದು ಒಂದಾಗುವಂತೆ ಸಂದೇಶವನ್ನು ಪಡೆಯುತ್ತಾರೆ. ಆಗ ನೀಲಾಂಬಿಕೆಯವರನ್ನು ಕರೆತರುವಂತೆ ಅಪ್ಪಣ್ಣನವರಿಗೆ ಹೇಳಿ ಕಳಿಸುತ್ತಾರೆ. ಕೂಡಲ ಸಂಗಮ ಮತ್ತು ತಂಗಡಗಿ ಗ್ರಾಮಗಳು ಕೃಷ್ಣಾ ನದಿಯ ಎರಡು ದಂಡೆಗಳ ಮೇಲಿರುವ ಗ್ರಾಮಗಳು. ಮಳೆಗಾಲವಾದ್ದರಿಂದ ಕೃಷ್ಣಾ ನದಿ ತುಂಬಿ ಹರಿಯುತ್ತಿದೆ. ಬಸವಕಲ್ಯಾಣದಿಂದ ಆಗಮಿಸಿದ ತಾಯಿ ನೀಲಾಂಬಿಕೆ ಮತ್ತು ಅಪ್ಪಣ್ಣನವರು ತಂಗಡಗಿಯಲ್ಲಿ

ಬೀಡು ಬಿಟ್ಟಿರುತ್ತಾರೆ. ಅಂದಿನ ಕಾಲದಲ್ಲಿ ತಂಗಡಗಿಯಿಂದ ಕೂಡಲಸಂಗಮಕ್ಕೆ ಬರಲು ನದಿ ಹರಿಯುವಾಗ ದೋಣಿಯಲ್ಲಿ ಬರಬೇಕಿತ್ತು. ಇಲ್ಲವೇ ಬೇಸಿಗೆಯಲ್ಲಿ ನಡೆದು ಬರಬಹುದಾಗಿತ್ತು ಅದೊಂದೇ ದಾರಿ. ಹೀಗಾಗಿ ನದಿ ತುಂಬಿ ಹರಿಯುತ್ತಿರುವಾಗ ನದಿ ದಾಟಲಿಕ್ಕಾಗದೆ ೨-೩ ದಿನ ಅಲ್ಲಿಯೇ ತಂಗುತ್ತಾರೆ. ಆ ಕಡೆ ಕೂಡಲ ಸಂಗಮದಲ್ಲಿ ಇಷ್ಟಲಿಂಗಯೋಗ ನಿರತರಾಗಿದ್ದ ಗುರುಬಸವಣ್ಣನವರು ದಿನಾಂಕ ೩೦-೭-೧೧೯೬ ಶ್ರಾವಣ ಶುದ್ಧ ಪಂಚಮಿಯಂದು ಲಿಂಗೈಕ್ಯರಾಗುತ್ತಾರೆ. ಅವರ ಸಮಾಧಿ ಮಾಡಿ ಅದರ ಮೇಲೆ ಜ್ಯೋತಿಯನ್ನು ಹಚ್ಚಿರುವುದನ್ನು ನೋಡಿ ನೀಲಾಂಬಿಕೆಯುವರು ಗುರು ಬಸವಣ್ಣನವರು ಲಿಂಗೈಕ್ಯರಾಗಿರುವುದನ್ನು ತಿಳಿದುಕೊಳ್ಳುತ್ತಾರೆ. ಗುರು ಬಸವಣ್ಣನವರು ಲಿಂಗೈಕ್ಯರಾದ ಮೇಲೆ ತಾಯಿ ನೀಲಾಂಬಿಕೆಯವರು ಬರೆದ ವಚನಗಳನ್ನು ಓದಿದರೆ ನಮ್ಮ ಹೃದಯ ಕಲಕಿದಂತಾಗುತ್ತದೆ. ಆ ವಚನಗಳಲ್ಲಿ ಬಸವ ಪ್ರಲಾಪವಿದೆ. ಅದು ಅಲೌಕಿಕವಾದ, ಒಬ್ಬ ಗುರುವನ್ನು ಕಳೆದುಕೊಂಡ ಪ್ರಲಾಪವಾಗಿದೆ.

ಲಕ್ಷದ ಮೇಲೆ ತೊಂಬತ್ತಾರುಸಾವಿರ ಜಂಗಮಕ್ಕೆ
ಮಾಡುವ ಮಾಟವಳಿಯಿತ್ತು ಬಸವಾ
ಇಂದಿಗೆ ಊಟವಳಿಯಿತ್ತು ಬಸವಾ.
ಇಂದಿಂಗೆ ಅವರ ಸಂಗವಳಿದು
ನಿರಾಲಂಬಮೂರ್ತಿಯ ಇರವು ಕಾಣಿಸಿತಯ್ಯಾ ಬಸವಾ,
ಸಂಗಯ್ಯಾ, ಬಸವನ ರೂಪು ಎನ್ನಲ್ಲಿ ಅಡಗಲು
ಸಮಯಾಚಾರವಡಗಿದ ಬಸವಾ,
ಸಂಗ ನಿಸ್ಸಂಗವಾದ ಬಸವಾ,
ಶಬ್ದವಡಗಿದ ಬಸವಾ, ಶೂನ್ಯವಳಿದ ಬಸವಾ,
ಪ್ರಸಾದ ಹಿಂಗಿದ ಬಸವಾ,
ಪ್ರಸನ್ನಮೂರ್ತಿಯ ಕಂಡ ಬಸವಾ.
ಪ್ರಭೆಯಳಿದ ಬಸವಾ, ಪ್ರಸನ್ನರೂಪ ಬಸವಾ,
ಕಾಯವನಳಿದನಯ್ಯಾ ಸಂಗಯ್ಯನ ಗುರುಬಸವ.

ಆದಿ ನಾದದ ಬಿಂದುವನರಿದು ಭಕ್ತಿಸಂಭಾಷಣೆಯ ಮಾಡಿದ ಬಸವಾ,
ಪ್ರಣವದಲ್ಲಿ ನಿಜವ ಕಂಡು ತೋರಿದ ಬಸವಾ.
ಆ ಪ್ರಣವದ ಘನವ ಕಂಡ ಬಸವಾ.
ಇತರ ತೃಪ್ತಿಯನನುಭವಿಸಬಲ್ಲ ಬಸವಾ
ನೀನೆನ್ನಲ್ಲಿ ಅಡಗಿ, ನಾ ನಿನ್ನಲ್ಲಿ ಅಡಗಿ,
ನಾ ನಿನ್ನ ಮನದ ಅರಿವನರಿದು ಉಭಯವಿಲ್ಲವೆಂದೆನೆಂದೆ ಬಸವಾ.
ಸುಖದ ಸಮಯಾಚಾರವ ಕಂಡು ನಿಜದಲ್ಲಿ ನಿಂದವಳಾನು ನಾನಯ್ಯ ಬಸವಾ.
ಸಂಗಯ್ಯನಲ್ಲಿ ನಿಜವಿಡಿದ ಹೆಣ್ಣು ನಾನೇ ಅಹುದೆಂದು
ನುಡಿದೆನಯ್ಯಾ ಅಪ್ಪಣ್ಣಾ.

ನಾಡಿನ ಹೆಣ್ಣುಗಳೆಲ್ಲಾ ಬನ್ನಿರೆ ಅಕ್ಕಗಳಿರಾ,
ಅಕ್ಕನರಸ ಬಸವಯ್ಯನು ಬಯಲ ಕಂಡು ಬಟ್ಟಬಯಲಾದನು.
ಅಕ್ಕನರಸನಿಲ್ಲದೆ ನಿರಕ್ಕರನಾದನು ಬಸವಯ್ಯನು.

ನಮ್ಮ ಸಂಗಯ್ಯನಲ್ಲಿ ಬಸವಯ್ಯನೈಕ್ಯ ಬಯಲಿಲ್ಲದ ಬಯಲು.

ಕೊನೆಗೆ ತಮ್ಮ ಮನಸ್ಸನ್ನು ಸ್ಥಿಮಿತಕ್ಕೆ ತಂದು ಕೊಂಡು ಅಲೌಕಿವಾದ ಪ್ರಲಾಪವನ್ನು ಮೀರಿ ಅಂದಿನ ಸಂಜೆಯ ಇಷ್ಟಲಿಂಗ ಪೂಜೆಯಲ್ಲಿ ನಿರತರಾಗುತ್ತಾರೆ.

ಗುರು ಬಸವಣ್ಣನವರು ಬೆಳಕಿನ ಶರೀರಧಾರಿಯಾಗಿ ನೀಲಾಂಬಿಕೆಯವರ ಕರಸ್ಥಲದ ಇಷ್ಟಲಿಂಗದಲ್ಲಿ ದರ್ಶನ ಕೊಡುತ್ತಾರೆ. ನಾನು ಲಿಂಗದೇವನಲ್ಲಿ ಒಡವೆರದು ಒಂದಾಗಿದ್ದೇನೆ ನೀನು ಸಹ ಲಿಂಗೈಕ್ಯಳಾಗು ಎನ್ನುವ ಸಂದೇಶವನ್ನೂ ಪಡೆಯುತ್ತಾರೆ. ಆಗ ತಮ್ಮ ಮನಸ್ಸಿಗೆ ಈ ರೀತಿಯಾಗಿ ಸಮಾಧಾನ ಹೇಳಿಕೊಳ್ಳುತ್ತಾ ತಾವೂ ಲಿಂಗೈಕ್ಯರಾಗುತ್ತಾರೆ.

ನಾನಾರ ಸಾರುವೆನೆಂದು ಚಿಂತಿಸಲೇತಕ್ಕಯ್ಯಾ ಬಸವಾ ?
ನಾನಾರ ಹೊಂದುವೆನೆಂದು ಭ್ರಮೆಬಡಲೇತಕ್ಕಯ್ಯಾ ಬಸವಾ ?
ನಾನಾರ ಇರವನರಿವೆನೆಂದು ಪ್ರಳಾಪಿಸಲೇತಕ್ಕಯ್ಯಾ ಬಸವಾ ?
ಪರಿಣಾಮಮೂರ್ತಿ ಬಸವನರೂಪು ಎನ್ನ ಕರಸ್ಥಲದಲ್ಲಿ ಬೆಳಗಿದ
ಬಳಿಕ ಸಂಗಯ್ಯನ ಹಂಗು ನಮಗೇತಕ್ಕಯ್ಯಾ ಬಸವಾ ?

ನಾನೀಗ ಯಾರ ಹತ್ತಿರ ಹೋಗಲಿ? ಯಾರನ್ನು ನನ್ನವರೆನ್ನಲಿ? ಎಂದು ಕಳವಳ ಪಡಬೇಡ. ಯಾರ ಇರುವನ್ನು ಅರಿಯಬೇಕು ಎನ್ನುವ ಪ್ರಲಾಪವೇಕೆ? ಗುರು ಬಸವಣ್ಣನವರು ನನ್ನ ಕರಸ್ಥಲದ ಇಷ್ಟಲಿಂಗದಲ್ಲಿಯೇ ಇರುವಾಗ ನಾನು ಅದರಲ್ಲಿಯೇ ಒಡವೆರದು ಒಂದಾಗಬೇಕು ಎಂದು ಇಷ್ಟಲಿಂಗಯೋಗ ನಿರತರಾಗಿ ಮರುದಿನ ತಾವೂ "ಉರಿಯುಂಡ ಕರ್ಪೂರದಂತೆ ತೆರಹಿಲ್ಲದೆ ನಿಂದೆನಯ್ಯ. ನಿಂದು ನಿರ್ವಯಲಾಗಿ ಲಿಂಗ ಲಿಂಗಾಂಗಿಯಾನಾಗಿ, ನೀರೊಳಗೆ ನೀರು ಬೆರದಂತಾನಾದೆನಯ್ಯ ಸಂಗಯ್ಯ ಸಂಗಯ್ಯ"; "ಎನಗೆ ಇಲ್ಲಿ ಏನು ಬಸವ ಬಸವಾ? ಎನಗೆ ಅದರ ಕುರುಹೇನು ಬಸವಾ? ಎನಗೆ ಬಸವ ನಡೆದ ಭಕ್ತಿಸ್ಥಲದಲ್ಲಿ ನಿಂದು, ಭಕ್ತಿಸ್ಥಲ ಬಸವನಲ್ಲಿ ಕುರುಹಳಿದು, ನಾನು ಬಸವನ ಶ್ರೀಪಾದದಲ್ಲಿ ಉರಿಯುಂಡ ಕರ್ಪೂರ ದಂತಡಗಿದ ಬಳಿಕ ಸಂಗಯ್ಯಾ?" ಎಂದು ಲಿಂಗೈಕ್ಯರಾಗುತ್ತಾರೆ.

ತಾಯಿ ನೀಲಾಂಬಿಕೆಯವರು ಲಿಂಗೈಕ್ಯರಾದ ಆ ದಿನವು ನೀಲಾಂಬಿಕಾ ಷಷ್ಠಿಯೆಂದು ಕರೆಯಲ್ಪಡುತ್ತಿದೆ. ಆ ದಿವ್ಯವಾದ ಮಹಾನ್ ಚೈತನ್ಯದ ಪಾದದ ಪಾದುಕೆಯ ಧೂಳು ನಾವಾಗಿ ಅವರ ಶ್ರೀಚರಣಾಂಬುಜಕ್ಕೆ ಅನಂತ ಶರಣು ಶರಣಾರ್ಥಿಗಳನ್ನು ಸಲ್ಲಿಸೋಣ.

ಜ್ಞಾನದ ಬೀಡು

ಈ ಇಳೆಯ ಬದುಕಿಗೆ
ತುಂಬಿದರು ವಚನದ ರುಚಿಯ
ಹರಹಿದರು ಬಸವ ಭಕ್ತಿಯ
ಶರಣರ ತ್ಯಾಗವಂ ಅರಿಯಿತು ಲೋಕ
ಕಳೆಬಂತು ಕೂಡಲಿಕೆ ಜ್ಞಾನದ ಬೀಡಾಯ್ತು ಕಲ್ಯಾಣ
ವಿಶ್ವದ ಜನವೆಲ್ಲ ನೋಡುವಂತಾಯ್ತು
ಕಲ್ಯಾಣ ನಾಡನು ಬಸವ ಭಕ್ತರಿಗಾಯಿತು ಪರಮಾನಂದ
ಮಾತಾಜಿಯ ಜನ್ಮ ಸಾರ್ಥಕವಾಯ್ತು
ಲೀಲಾವಿಶೇಷ ಲಿಂಗದೇವನ ಮೆರದರೌ.

– ಪೂಜ್ಯ ಶ್ರೀ ಮಾತೆ ಜ್ಞಾನೇಶ್ವರಿ

ಓಂ ಶ್ರೀ ಗುರು ಬಸವ ಲಿಂಗಾಯ ನಮಃ

866666

ಪೂ.ಶ್ರೀ ಜಗದ್ಗುರು ಡಾ.ಮಾತೆ ಮಹಾದೇವಿ ತಾಯಿಯವರ ಸಾಧನೆಯ ಉತ್ತುಂಗದ ನಾಮಾವಳಿಗಳು. ಇವುಗಳನ್ನು ಭಕ್ತಿ ಪೂರ್ವಕವಾಗಿ ಪರಮಪೂಜ್ಯರ ಪಾದಕಮಲಗಳಿಗೆ ಅರ್ಪಣೆ ಮಾಡುತ್ತಿರುವ ಶರಣ ಬಾಣೂರುಚನ್ನಪ್ಪ, ಕಲ್ಯಾಣ ನಗರ, ಚಿಕ್ಕಮಗಳೂರು.

1. ಪೂ.ಶ್ರೀ ಜಗದ್ಗುರು ಡಾ. ಮಾತೆ ಮಹಾದೇವಿ ಗುರುವೇ ಶರಣು ಶರಣಾರ್ಥಿ.
2 ಆಧುನಿಕ ಜಗತ್ತಿನ ಧಾರ್ಮಿಕ ಕ್ಷೇತ್ರದಲ್ಲಿ ಬೆಳಗಿದ ತಾರೆಯೇ ಶರಣು ಶರಣಾರ್ಥಿ.
3. ಸ್ತ್ರೀ ಪರಚಿಂತನಾಕ್ರಾಂತಿಯ ಹರಿಕಾರರೇ ಶರಣು ಶರಣಾರ್ಥಿ
4. ಧಾರ್ಮಿಕ ಇತಿಹಾಸದಲ್ಲಿ ಪ್ರಜ್ವಲಿಪ ನಕ್ಷತ್ರವೇ ಶರಣು ಶರಣಾರ್ಥಿ
5. ಮಹಾನ್ ಪ್ರವಾದಿಗಳ, ಸಂತರ ಸಂದೇಶಕ್ಕೆ ಮಾರುಹೋದಗುರುವೇ ಶರಣು ಶರಣಾರ್ಥಿ
6. ಚಿನ್ಮಲಾದ್ರಿ ಚಿತ್ಕಳೆಯಾದ ಗುರುವೆ ಶರಣು ಶರಣಾರ್ಥಿ
7. ಶರಣೆಗಂಗಮ್ಮಡಾ.ಬಸಪ್ಪನವರ ಮುದ್ದಿನ ಮಗಳೇ ಶರಣು ಶರಣಾರ್ಥಿ
8. ತಂದೆತಾಯಿ ಇಟ್ಟ ರತ್ನಾ ಎಂಭ ಅಭಿಧಾನವ ಪಡೆದಗುರುವೇ ಶರಣು ಶರಣಾರ್ಥಿ
9. ದೀನ ದಲಿತರ ಕಂಡು ಬಾಲ್ಯದಲ್ಲೇ ಮರುಗಿದ ಗುರುವೇ ಶರಣು ಶರಣಾರ್ಥಿ
10. ವಿದ್ಯಾರ್ಥಿ ದೆಸೆಯಲ್ಲಿಯೇ ದೇಶಪ್ರೇಮ ತೋರಿದ ಗುರುವೇ ಶರಣು ಶರಣಾರ್ಥಿ
11. ಗುರುಲಿಂಗಾನಂದರ ಪ್ರವಚನಕ್ಕೆ ಮಾರು ಹೋದಗುರುವೇ ಶರಣು ಶರಣಾರ್ಥಿ
12. ಗುರು ಲಿಂಗಾನಂದರ ಕರಕಮಲ ಸಂಜಾತರಾಗಿ ಮಾತೆ ಮಹಾದೇವಿ ಎಂಬ ಅಭಿಧಾನವ ಪಡೆದಗುರುವೇ ಶರಣು ಶರಣಾರ್ಥಿ
13. ಬಸವಣ್ಣನವರ ತತ್ತ್ವ ಸಾರಲು ಮನೆ ಬಿಟ್ಟಗುರುವೇ ಶರಣು ಶರಣಾರ್ಥಿ
14. ಲೌಕಿಕ ಜೀವನಕ್ಕೆ ತಿಲಾಂಜಲಿ ಕೊಟ್ಟಗುರುವೇ ಶರಣು ಶರಣಾರ್ಥಿ
15. ಲೌಕಿಕ ಜೀವನ ಪ್ರತಿಪಾದಿಸಲು ಬಂದ ಬಂಧುಗಳಿಗೆ ದಿಟ್ಟಉತ್ತಕೊಟ್ಟಗುರುವೇ ಶರಣು ಶರಣಾರ್ಥಿ
16. ಕಿರಿದಾದ ವಯಸ್ಸಿನಲ್ಲೇ ಸನ್ಯಾಸ ದೀಕ್ಷೆ ಪಡೆದ ಗುರುವೇ ಶರಣು ಶರಣಾರ್ಥಿ
17. ಹರದ್ವಾರ ಋಷಿಕೇಶದಲ್ಲಿ ತಪವಗೈದ ಗುರುವೇ ಶರಣು ಶರಣಾರ್ಥಿ
18. ಮಹಾದೇವಿಯಕ್ಕನ ಅನುಭೂತಿ ಪಡೆದ ಗುರುವೇ ಶರಣು ಶರಣಾರ್ಥಿ
19. ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ವಿಶಿಷ್ಟ ಸಾಧನೆ ಮಾಡಿದ ಯೋಗಿಣಿಯವರೇ ಶರಣು ಶರಣಾರ್ಥಿ
20. ಶರಣ ಸಂಸ್ಕೃತಿಯ ಅಚಲ ಪ್ರತಿಪಾದಕ ಗುರುವೇ ಶರಣು ಶರಣಾರ್ಥಿ
21. ಸಮಾಜದ ಅಜ್ಞಾನ ಅಂಧಕಾರ ಎತ್ತಿತೋರಿದ ಗುರುವೇ ಶರಣು ಶರಣಾರ್ಥಿ
22. ಸ್ತ್ರೀ ಜಗದ್ಗುರು ಪೀಠಾರೋಹಣ ಮಾಡಿದ ಪ್ರಥಮಗುರುವೇ ಶರಣು ಶರಣಾರ್ಥಿ
23. ಸ್ತ್ರೀ ಜಗದ್ಗುರು ಪೀಠಾರೋಹಣ ಮಾಡಿ ಧಾರ್ಮಿಕ ಜಗತ್ತಿನ ಗಮನ ಸೆಳೆದ ಗುರುವೇ ಶರಣು ಶರಣಾರ್ಥಿ
24. ಸ್ತ್ರೀ ಜಗದ್ಗುರು ಪೀಠಾರೋಹಣ ಮಾಡಿ ಸಂಪ್ರದಾಯವಾದಿಗಳ ಕೆಂಗಣ್ಣಿಗೆ

ಗುರಿಯಾದಗುರುವೇ ಶರಣು ಶರಣಾರ್ಥಿ

25. ಸ್ತ್ರೀ ಜಗದ್ಗುರು ಪೀಠದ ಬಗ್ಗೆ ಕೊಂಕು ನುಡಿದವರಿಗೆ ದಿಟ್ಟಉತ್ತರಕೊಟ್ಟ ಗುರುವೇ ಶರಣು ಶರಣಾರ್ಥಿ
26. ಸಂಪ್ರದಾಯವಾದಿಗಳು ಒಡ್ಡಿದ ಆತಂಕಗಳನ್ನು ಎದುರಿಸಿದ ಗುರುವೇ ಶರಣು ಶರಣಾರ್ಥಿ
27. ಸ್ತ್ರೀ ಶೋಷಣೆಯ ವಿರುದ್ಧ ಧ್ವನಿ ಎತ್ತಿದಗುರುವೇ ಶರಣು ಶರಣಾರ್ಥಿ
28. ಅಸಹಾಯಕ ಸ್ತ್ರೀ ಸಮೂಹಕ್ಕೆ ಆಶಾಕಿರಣವಾದ ಗುರುವೇ ಶರಣು ಶರಣಾರ್ಥಿ
29. ಅಸಹಾಯಕ ಸ್ತ್ರೀಯರಿಗೆ ಆಶ್ರಯದಾತ ಗುರುವೇ ಶರಣು ಶರಣಾರ್ಥಿ
30. ಅಧ್ಯಾತ್ಮ ಸಾಧನೆಗೆ ಮಾರ್ಗದರ್ಶಕರಾದಗುರುವೇ ಶರಣು ಶರಣಾರ್ಥಿ
31. ಭ್ರಷ್ಟಾಚಾರಗಳ ಬಿಟ್ಟು ನೈತಿಕ ಮಾರ್ಗ ಹಿಡಿಯಿರಿಎಂದಗುರುವೇ ಶರಣು ಶರಣಾರ್ಥಿ
32. ನಾಡಿನಜನತೆಯಧಾರ್ಮಿಕ, ಸಾಮಾಜಿಕಜೀವನದಲ್ಲಿಕ್ರಾಂತಿ ಪರಂಪರೆ ಹುಟ್ಟು ಹಾಕಿದಗುರುವೇ ಶರಣು ಶರಣಾರ್ಥಿ
33. ಸ್ತುತಿ ನಿಂದೆಗಳನ್ನು ಸಮಾನವಾಗಿ ಸ್ವೀಕರಿಸಿದ ಗುರುವೇ ಶರಣು ಶರಣಾರ್ಥಿ
34. ಸ್ತ್ರೀ ಕುಲೋದ್ಧಾರಕಗುರುವೇ ಶರಣು ಶರಣಾರ್ಥಿ
35. ಪ್ರವಚನಯೋಗದಿಂದಅಸಂಖ್ಯಾತರನ್ನು ಪರಿವರ್ತಿಸಿದ ಗುರುವೇ ಶರಣು ಶರಣಾರ್ಥಿ
36. ಪ್ರವಚನಗಳ ಮೂಲಕ ಶರಣ ಜೀವನಾನುಭವಗಳನ್ನು ತೋರಿದಗುರುವೇ ಶರಣು ಶರಣಾರ್ಥಿ
37. ಧರ್ಮ–ತತ್ವಗಳ ಆಚರಣೆಯಿಂದ ಮಾತ್ರ ಮಾನವ ಕುಲಕ್ಕೆ ಶಾಂತಿ ನೆಮ್ಮದಿ ಸಾಧ್ಯವೆಂದ ಗುರುವೇ ಶರಣು ಶರಣಾರ್ಥಿ
38. ಪ್ರವಚನಗಳಿಂದ ಸಮಾಜ ಶುದ್ಧೀಕರಿಸಿದ ಗುರುವೇ ಶರಣು ಶರಣಾರ್ಥಿ
39. ಪ್ರವಚನಗಳ ಮೂಲಕ ಅಸಂಖ್ಯಾತರನ್ನು ಸಾತ್ವಿಕರನ್ನಾಗಿಸಿದ ಗುರುವೇ ಶರಣು ಶರಣಾರ್ಥಿ
40. ಪ್ರವಚನಗಳಿಂದ ಸಮಾಜದ ಸಮಸ್ಯೆಗಳಿಗೆ ಪರಿಹಾರ ನೀಡಿದಗುರುವೇ ಶರಣು ಶರಣಾರ್ಥಿ
41. ಪ್ರವಚನ ಕಾರ್ಯಾಗಾರಗಳಿಂದ ಅಸಾಧ್ಯವಾದುದನ್ನು ಸಾಧ್ಯ ಮಾಡಿದಗುರುವೇ ಶರಣು ಶರಣಾರ್ಥಿ
42. ಪ್ರವಚನದ ಮೂಲಕ ದುರ್ವ್ಯಸನಿಗಳನ್ನು ಶರಣರನ್ನಾಗಿಸಿದ ಗುರುವೇ ಶರಣು ಶರಣಾರ್ಥಿ
43. ಜ್ಞಾನಧಾರೆ ಹರಿಸಿ ಜಾತೀಯತೆಯ ಬೇರನ್ನು ಕಿತ್ತೆಸೆದಗುರುವೇ ಶರಣು ಶರಣಾರ್ಥಿ
44. ಯುವ ಚೇತನಗಳಲ್ಲಿ ಕಾಯಕತತ್ತ್ವ ಬಿತ್ತಿ ಉದ್ಧರಿಸಿದ ಗುರುವೇ ಶರಣು ಶರಣಾರ್ಥಿ
45. ಯುವಜನಾಂಗವನ್ನು ಪ್ರಗತಿಪರಚಿಂತನೆಗೆ ಪ್ರೇರೇಪಿಸಿದ ಗುರುವೇ ಶರಣು ಶರಣಾರ್ಥಿ
46. ವರದಕ್ಷಿಣೆ ಪಡೆಯುವುದು ಹಳಸಿದನ್ನ ತಿಂದಂತೆಎಂದಗುರುವೇ ಶರಣು ಶರಣಾರ್ಥಿ
47. ವರದಕ್ಷಿಣೆರಹಿತ ಸರಳ ವಿವಾಹ ಜರುಗುವಂತೆ ಮಾಡಿದಗುರುವೇ ಶರಣು ಶರಣಾರ್ಥಿ
48. ವಿಧವಾ ವಿವಾಹಗಳನ್ನು ಪ್ರೋತ್ಸಾಹಿಸಿದ ಗುರುವೇ ಶರಣು ಶರಣಾರ್ಥಿ
49. ಪ್ರವಚನಗಳಿಂದ ಕೋಮುಗಲಭೆಗಳನ್ನು ತಪ್ಪಿಸಿ ಸೌಹಾರ್ದ ಉಂಟು ಮಾಡಿದಗುರುವೇ ಶರಣು ಶರಣಾರ್ಥಿ

50. ಪ್ರವಚನಗಳಿಂದ ಅನ್ಯಧರ್ಮೀಯರನ್ನೂ ಪರಿವರ್ತಿಸಿ ಲಿಂಗವಂತರನ್ನಾಗಿ ಮಾಡಿದಗುರುವೇ ಶರಣು ಶರಣಾರ್ಥಿ

51. ಪ್ರವಚನ ಕಮ್ಮಟಗಳಿಂದ ಅನುಭವ ಮಂಟಪದ ನೆನಪು ಮಾಡಿದಗುರುವೇ ಶರಣು ಶರಣಾರ್ಥಿ

52. ಪ್ರವಚನ ಮನೋರೋಗಿಗಳಿಗೆ ಒಂದುಚಿಕಿತ್ಸೆ ಎಂದು ಮನೋರೋಗ ತಜ್ಞರಿಂದ ಪ್ರಶಂಸೆ ಪಡೆದ ಗುರುವೇ ಶರಣು ಶರಣಾರ್ಥಿ

53. ಪ್ರವಚನದ ಸಮ್ಮೋಹನದಿಂದ ಜನರ ಪರಿವರ್ತನೆ ಮಾಡಿದಗುರುವೇ ಶರಣು ಶರಣಾರ್ಥಿ

54. ಇಷ್ಟಲಿಂಗ ಪೂಜಾ ಪ್ರಾತ್ಯಕ್ಷಿಕೆ ನೀಡಿಕ್ರಾಂತಿ ಮಾಡಿದಗುರುವೆ ಶರಣು ಶರಣಾರ್ಥಿ

55. ಇಷ್ಟಲಿಂಗದ ಬಗ್ಗೆ ಇದ್ದ ಮಡಿ ಮೈಲಿಗೆ ಎಂಬ ತಪ್ಪುಕಲ್ಪನೆಯನ್ನು ತೊಡೆದು ಹಾಕಿದ ಗುರುವೇ ಶರಣು ಶರಣಾರ್ಥಿ

56. ವಿದೇಶಗಳಲ್ಲಿಯೂ ಶರಣಧರ್ಮ ಸಂಸ್ಕೃತಿಯ ಮಹತ್ವ ಎತ್ತಿ ಹಿಡಿದ ಗುರುವೇ ಶರಣು ಶರಣಾರ್ಥಿ

57. ವಿದೇಶಗಳಲ್ಲಿಯೂ ಬಸವ ಜ್ಯೋತಿ ಹತ್ತಿಸಿ ಬಂದ ಗುರುವೇ ಶರಣು ಶರಣಾರ್ಥಿ

58. ತಮ್ಮ ಧಾರ್ಮಿಕ ಪ್ರವಚನಗಳಿಂದ ವಿದೇಶಗಳಲ್ಲಿ ವಿವೇಕಾನಂದರ ನೆನಪು ಮಾಡಿದ ಗುರುವೇ ಶರಣು ಶರಣಾರ್ಥಿ .

59. ಭೌತಿಕ ಸಂಪತ್ತಿಗಿಂತ ಮಾನಸಿಕ ನೆಮ್ಮದಿ ಮುಖ್ಯವೆಂದು ಸಾರಿದಗುರುವೇ ಶರಣು ಶರಣಾರ್ಥಿ

60. ಜ್ಞಾನದ ಅಸ್ತ್ರದ ಮೂಲಕ ಮೌಢ್ಯಗಳನ್ನು ನಿರ್ಮೂಲನೆ ಮಾಡಿದಗುರುವೇ ಶರಣು ಶರಣಾರ್ಥಿ

61. ಅಧ್ಯಾತ್ಮಿಕ ಹಸಿವೆಯಿಂದ ನರಳುವವರಿಗೆ ಬಸವ ತತ್ವದಅಮೃತವನ್ನು ನೀಡಿ ಸಲಹಿದ ಗುರುವೇ ಶರಣು ಶರಣಾರ್ಥಿ

62. ಕಾಯಕತತ್ತ್ವವನ್ನು ಮನದಟ್ಟು ಮಾಡಿದ ಗುರುವೇ ಶರಣು ಶರಣಾರ್ಥಿ

63. ಈ ಯುಗದಲ್ಲಿ ಶರಣ ಸಮಾಜ ಸೃಷ್ಟಿಮಾಡಿದ ಗುರುವೇ ಶರಣು ಶರಣಾರ್ಥಿ

64. ಪರಮಗುರುವಿಗೆತಕ್ಕ ಶಿಷ್ಯೆಯಾದ ಗುರುವೇ ಶರಣು ಶರಣಾರ್ಥಿ

65. ತನ್ನಗುರುವಿನಿಂದ ಪ್ರಶಂಸೆ ಪಡೆದಗುರುವೇ ಶರಣು ಶರಣಾರ್ಥಿ

66. ಗುರು ಶಿಷ್ಯರು ಸೇರಿ ಬಸವ ತತ್ತ್ವವನ್ನು ವಿಶ್ವದೆತ್ತರಕ್ಕೆಕೊಂಡೊಯ್ದಗುರುವೇ ಶರಣು ಶರಣಾರ್ಥಿ

67. ಗುರು ಶಿಷ್ಯರ ಸಂಬಂಧಕ್ಕೆ ಆದರ್ಶವಾದ ಗುರುವೇ ಶರಣು ಶರಣಾರ್ಥಿ

68. ಇಷ್ಟ ಲಿಂಗ ಸಮಾನತೆಯ ಕುರುಹೆಂದ ಗುರುವೇ ಶರಣು ಶರಣಾರ್ಥಿ

69. ಇಷ್ಟಲಿಂಗ ಮನಶ್ಶಾಂತಿಗೆ ಪೂರಕವೆಂದು ಸಾದರ ಪಡಿಸಿದ ಗುರುವೇ ಶರಣು ಶರಣಾರ್ಥಿ

70. ಇಷ್ಟಲಿಂಗ ಯೋಗದ ಮಹತ್ತ್ವ ತಿಳಿಸಿದ ಗುರುವೇ ಶರಣು ಶರಣಾರ್ಥಿ

71. ಪರಮಾತ್ಮನ ಸಾಕ್ಷಾತ್ಕಾರಕ್ಕೆ ಲಿಂಗ ಯೋಗ ಸಾಧನವೆಂದು ತೋರಿದ ಗುರುವೇ ಶರಣು ಶರಣಾರ್ಥಿ

72. ಇಷ್ಟಲಿಂಗ ಪರಮಾತ್ಮನ ಸಾಮ್ರಾಜ್ಯಕ್ಕೆರಹದಾರಿಎಂದು ಸಾರಿದಗುರುವೇ ಶರಣು ಶರಣಾರ್ಥಿ

73. ಬಸವ ತತ್ತ್ವವನ್ನುಜನ ಸಮುದಾಯದ ಬದುಕಿನ ಸತ್ವವಾಗಿಸಿದ ಗುರುವೇ ಶರಣು ಶರಣಾರ್ಥಿ

74. ಬಸವ ಯೋಗವನು ಜನಪ್ರಿಯಗೊಳಿಸಿದ ಗುರುವೇ ಶರಣು ಶರಣಾರ್ಥಿ

75. ಬಸವ ತತ್ತ್ವ ಮರೆತು ನಿದ್ರಿಸುತ್ತಿದ್ದವರನು ಎಚ್ಚರಗೊಳಿಸಿದ ಗುರುವೇ ಶರಣು ಶರಣಾರ್ಥಿ

76. ಬಸವ ತತ್ತ್ವದ ಬೆಳಕಿಂದ ಅಜ್ಞಾನದಕತ್ತಲೆಯ ಓಡಿಸಿದ ಗುರುವೇ ಶರಣು ಶರಣಾರ್ಥಿ

77. ಬಸವ ತತ್ತ್ವದಕ್ರಿಯಾತ್ಮಕ ಸಮಾಜವನು ನಿರ್ಮಿಸಿದ ಗುರುವೇ ಶರಣು ಶರಣಾರ್ಥಿ

78. ಬಸವ ತತ್ತ್ವದಿಂ ವೈಚಾರಿಕ ಕ್ರಾಂತಿಯನ್ನುಂಟು ಮಾಡಿದ ಗುರುವೇ ಶರಣು ಶರಣಾರ್ಥಿ

79. ಬಸವ ತತ್ತ್ವದ ಪುನರುತ್ಥಾನಗೈದ ಗುರುವೇ ಶರಣು ಶರಣಾರ್ಥಿ

80. ಶರಣ ಸಂಸ್ಕೃತಿಯ ಆರಾಧಕ ಗುರುವೇ ಶರಣು ಶರಣಾರ್ಥಿ

81. ನಿರ್ಭೀತವಾಗಿತತ್ತ್ವ ಪ್ರತಿಪಾದನೆ ಮಾಡಿದಗುರುವೇ ಶರಣು ಶರಣಾರ್ಥಿ

82. ಶರಣ ಸಂಸ್ಕೃತಿಯ ಆದರ್ಶ ಸಮಾಜ ನಿರ್ಮಾಪಕಗುರುವೇ ಶರಣು ಶರಣಾರ್ಥಿ

83. ಕಲ್ಯಾಣಕಿರಣ ಪತ್ರಿಕೆಯರೂವಾರಿಯಾದ ಗುರುವೇ ಶರಣು ಶರಣಾರ್ಥಿ

84. ಕಲ್ಯಾಣಕಿರಣ ಪತ್ರಿಕೆಯ ಮೂಲಕ ಮನೆ, ಮನಗಳಿಗೆ ಜ್ಞಾನಧಾರೆ ಹರಿಸಿದ ಗುರುವೇ ಶರಣು ಶರಣಾರ್ಥಿ

85. ಕಲ್ಯಾಣಕಿರಣವನ್ನು ಸಮೃದ್ಧಧಾರ್ಮಿಕ ಪತ್ರಿಕೆಯಾಗಿ ಬೆಳಸಿದ ಗುರುವೇ ಶರಣು ಶರಣಾರ್ಥಿ

86. ಕಲ್ಯಾಣಕಿರಣ ಪತ್ರಿಕೆ ಮೂಲಕ ವೈಚಾರಿಕಕ್ರಾಂತಿ ಹುಟ್ಟುಹಾಕಿದ ಗುರುವೇ ಶರಣು ಶರಣಾರ್ಥಿ

87. ಸಮಾಜದಲ್ಲಿಧರ್ಮ, ನೈತಿಕತೆಗೆ ಚ್ಯುತಿ ಬಂದಾಗ ಪತ್ರಿಕೆಯ ಮೂಲಕ ಜಾಗ್ರತೆ ಮೂಡಿಸಿದ ಗುರುವೇ ಶರಣು ಶರಣಾರ್ಥಿ

88. ವಿಶ್ವಕಲ್ಯಾಣ ಮಿಷನ್ ಸ್ಥಾಪಕ ಗುರುವೇ ಶರಣು ಶರಣಾರ್ಥಿ

89. ಪ್ರವಚನದ ಪಡೆಯನ್ನೇ ನಿರ್ಮಿಸಿದ ಗುರುವೇ ಶರಣು ಶರಣಾರ್ಥಿ

90. ಜನಸಾಮಾನ್ಯರಿಗೆತತ್ತ್ವ ತಿಳಿಸಲು ಕ್ರಾಂತಿಯೋಗಿ ಬಸವಣ್ಣ ಚಲನಚಿತ್ರ ನಿರ್ಮಿಸಿದ ಗುರುವೇ ಶರಣು ಶರಣಾರ್ಥಿ

91. ವಿಶ್ವ ಭ್ರಾತೃತ್ವಕ್ಕೆ ವಿನೂತನ ಶರಣ ಮೇಳ ಉತ್ಸವದ ರೂವಾರಿಗಳಾದ ಗುರುವೇ ಶರಣು ಶರಣಾರ್ಥಿ

92. ಲಿಂಗಾಯತರಿಗೆ ಪವಿತ್ರಕ್ಷೇತ್ರ ಕೂಡಲ ಸಂಗಮವೆಂದು ಗುರುತಿಸಿ ಕೊಟ್ಟಗುರುವೇ ಶರಣು ಶರಣಾರ್ಥಿ

93. ಶರಣತತ್ತ್ವ ಪ್ರತಿಪಾದನೆಗೆ ಕನ್ನಡದ ಶ್ರೇಷ್ಠ ಕೃತಿಗಳನ್ನು ನೀಡಿದಗುರುವೇ ಶರಣು ಶರಣಾರ್ಥಿ

94. ಕನ್ನಡ ಸಾಹಿತ್ಯ ಲೋಕಕೆ ಧಾರ್ಮಿಕ ಸಾಹಿತ್ಯ ನೀಡಿದ ಗುರುವೇ ಶರಣು ಶರಣಾರ್ಥಿ

95. ನಿರಂತರಅಧ್ಯಾತ್ಮ ಪರಿಸರ ಕಾಪಾಡಲು ಬಸವ ದಳ- ಬಸವ ಮಂಟಪ ನಿರ್ಮಾಣ ಮಾಡಿದಗುರುವೇ ಶರಣು ಶರಣಾರ್ಥಿ

96. ಶರಣ ಸಂಸ್ಕೃತಿ ಉಳಿಸಲು ಪಂಚಪೀಠಗಳನ್ನು ಸ್ಥಾಪಿಸಿದ ಗುರುವೇ ಶರಣು ಶರಣಾರ್ಥಿ

97. ಧರ್ಮ ಸಂಸ್ಕಾರ ನೀಡಲು ತರಬೇತಿ ಕಮ್ಮಟಗಳನ್ನು ಏರ್ಪಡಿಸಿದ ಗುರುವೇ ಶರಣು ಶರಣಾರ್ಥಿ

98. ರಾಷ್ಟ್ರಾಭಿಮಾನ ಜಾಗೃತಿಗೆ ರಾಷ್ಟ್ರಕಲ್ಯಾಣ ವಿದ್ಯಾರ್ಥಿಗಣ ಸ್ಥಾಪಕ ಗುರುವೇ ಶರಣು ಶರಣಾರ್ಥಿ

99. ಬಸವ ಕಲ್ಯಾಣದಲ್ಲಿ 108 ಅಡಿ ಬಸವೇಶ್ವರ ಪುತ್ಥಳಿ ನಿರ್ಮಿಸಿದ ಗುರುವೇ ಶರಣು ಶರಣಾರ್ಥಿ

100.ಶರಣ ಭೂಮಿ ಬಸವ ಕಲ್ಯಾಣದ ಮಹತ್ವ ಹೆಚ್ಚಿಸಿದ ಗುರುವೇ ಶರಣು ಶರಣಾರ್ಥಿ

101. ಭಾರತೀಯ ಧರ್ಮಗಳ ಒಕ್ಕೂಟದ ಸ್ಥಾಪಕ ಅಧ್ಯಕ್ಷರಾದಗುರುವೇ ಶರಣು ಶರಣಾರ್ಥಿ

102. ಭಕ್ತ ಸಮೂಹದ ಪ್ರೀತಿಯ ಮಾತಾಜಿಯವರೇ ಶರಣು ಶರಣಾರ್ಥಿ

103. ಶರಣ ಸಮೂಹಕೆ ಆರಾಧ್ಯದೈವವಾದಗುರುವೇ ಶರಣು ಶರಣಾರ್ಥಿ

104. ಧಾರ್ಮಿಕ ಕ್ಷೇತ್ರಕ್ಕೆ ಅನರ್ಘ್ಯರತ್ನವಾದ ಗುರುವೇ ಶರಣು ಶರಣಾರ್ಥಿ

105. ಲಿಂಗಾಯತಕೆ ಸ್ವತಂತ್ರ ಧರ್ಮದ ಮಾನ್ಯತೆಗಾಗಿ ಹೋರಾಡುತ್ತಿರುವ ಗುರುವೇ ಶರಣು ಶರಣಾರ್ಥಿ

106. ಮಹಿಳಾ ಕುಲಕೆ ಕಣ್ಮಣಿಯಾದ ಗುರುವೇ ಶರಣು ಶರಣಾರ್ಥಿ

107. ಬಸವ ಮುದ್ರೆಯ ನಾಣ್ಯ ಮುದ್ರಣಕೆಕಾರಣರಾದಗುರುವೇ ಶರಣು ಶರಣಾರ್ಥಿ

108. ಶರಣರ ಸಮಗ್ರ ವಚನಗಳ ಆಧರಿಸಿ ಧರ್ಮಗ್ರಂಥ ನೀಡಲಿರುವ ಗುರುವೇ ಶರಣು ಶರಣಾರ್ಥಿ

109. ಆಧುನಿಕ ಜಗತ್ತಿನ ದಾರ್ಶನಿಕ ಶ್ರೇಷ್ಠರಾದ ಗುರುವೇ ಶರಣು ಶರಣಾರ್ಥಿ

110. ಸಾಮರ್ಥ್ಯಕ್ಕೆ ಸಂದ ಗೌರವದಂತೆ ಡಾಕ್ಟರೇಟ್ ಪದವಿ ಪಡೆದ ಗುರುವೇ ಶರಣು ಶರಣಾರ್ಥಿ

ತ್ಯಾಗಯೋಗಿ

ಅಪ್ಪಾಜಿ ಅರ್ಪಿಸಿದರು ತಮ್ಮರಿವಿನ ಜ್ಞಾನ
ಸಮಾಜಕ್ಕೆ ತ್ಯಾಗ ಮಾಡಿದರು ತಮ್ಮ ಜೀವನ
ಜಗಜಟ್ಟಿಯಾಗಿ ಬಿತ್ತಿದರು
ಬಸವ ತತ್ವ ಬೀಜವ
ಶರಣ ಭೂಮಿ ಹಸನುಗೊಳಿಸಿ
ಲೀಲಾವಿಶೇಷ ಲಿಂಗದೇವನ
ತೋರಿ ಹೋದರು ನಗುನಗುತಾ.

– ಪೂಜ್ಯ ಶ್ರೀ ಮಾತೆ ಜ್ಞಾನೇಶ್ವರಿ

ಅಕ್ಕನ ಯೋಗಾಂಗ ತ್ರಿವಿಧಿ ಭಾಗ-5

– ಪೂಜ್ಯ ಶ್ರೀ ಜಗದ್ಗುರು
ಬಸವ ಕುಮಾರ ಸ್ವಾಮೀಜಿ

21. ಒಂಭತ್ತು ದ್ವಾರದ ಇಂಬುಗಳ ಬಲಿವುತ್ತ
ತುಂಬಿ ಸುಷುಮ್ನೆಯೊಳು । ಮನವ
ನೋಡಲ್ಕೆ ಕುಂಭದೊಳು ಅಮೃತ ಸುರಿಯುವುದು ॥

ಭಾವಾರ್ಥ :– ನವದ್ವಾರಗಳ ಕಟ್ಟಿ ಶಿವಧ್ಯಾನದೊಳಿರಲು ನವಖಂಡ ಪೃಥ್ವಿಯ ಮಾತೆಲ್ಲ! ಕಿವಿಯೊಳಗಿರುವುವು ಸರ್ವಜ್ಞ!! ಎಂಬ ಸರ್ವಜ್ಞನ ವಾಣಿಯು ಈ ನುಡಿಗೆ ಸ್ಫುಟವಾದ ಅರ್ಥ ನೀಡುವುದು. ಒಂದು ಬಲೂನಿಗೆ ಪುಟಬಾಲಿಗೆ ಸೂಜಿಯಿಂದ ಚುಚ್ಚಿದಾಗ ಟುಸ್ ಅಂತಾ ಮುದುಡಿಕೊಂಡು ನಿಸ್ಸತ್ವವಾಗುತ್ತೆ. ಆದರೆ ದೇವನು ಕೊಡಮಾಡಿದ ಈ ಅದ್ಭುತ ದೇಹಕ್ಕೆ ಒಂಭತ್ತು ದ್ವಾರಗಳು. ವಾಯುವಿನ ಸಂಚಾರ ಒಳಗೆ ಹೊರಗೆ ಹೋಗುವುದು ಬರುವುದು ನಡದೇ ಇರುತ್ತದೆ. ಈ ದೇಹವೆಂಬ ಬಲೂನು ಟುಸ್ ಎಂದು ನಿಸ್ಸತ್ವವಾಗದೇ ಸದಾ ಚೈತನ್ಯಮಯವಾಗಿರುತ್ತದೆ. ಒಂದೊಂದು ದ್ವಾರದಲ್ಲಿ ಒಂದೊಂದು ಅದ್ಭುತವಾದ ಶಕ್ತಿಯನ್ನು ಇಟ್ಟಿದ್ದಾನೆ ಪರಮಾತ್ಮನು. ಕಣ್ಣುಗಳಲ್ಲಿ ರೂಪನ್ನು ಗ್ರಹಿಸುವ, ಕಿವಿಯಲ್ಲಿ ಶಬ್ದಗಳನ್ನು ಗ್ರಹಿಸುವ, ಮೂಗಿನಲ್ಲಿ ವಾಸನೆಯನ್ನು ಗ್ರಹಿಸುವುದರ ಜೊತೆಗೆ ಆಯುಷ್ಯ ಮುಗಿಯುವವರೆಗೆ ಪ್ರಾಣವಾಯುವನ್ನು ತೆಗೆದುಕೊಳ್ಳುವುದು ಮತ್ತು ಅಂಗಾರಾಮ್ಲ ವಾಯುವನ್ನು ಹೊರಗೆ ಹಾಕುವುದನ್ನು ವಿಶೇಷ ಶಕ್ತಿ, (ನಾಲಿಗೆಯಲ್ಲಿ) ಬಾಯಿಯಲ್ಲಿ, ನಾಲಿಗೆ, ಹಲ್ಲುಗಳನ್ನು, ಗಂಟಲು, ರುಚಿಸುವ, ಮಾತನಾಡುವ, ತಿನ್ನುವ, ನುಂಗುವ ಹಾಡುವ ಶಕ್ತಿಯನ್ನು, ಜನನೇಂದ್ರಿಯದಿಂದ ಶರೀರದಲ್ಲಿ ಕೊಳೆಯಾದ ದ್ರವವನ್ನು ಹೊರಗೆ ಹಾಕುವ ಮತ್ತು ಮಾನವ ಕುಲಕೋಟಿಯನ್ನು ಉತ್ಪತ್ತಿ ಮಾಡುವ ಅದ್ಭುತ ಶಕ್ತಿಯ ವೀರ್ಯವನ್ನು, ಕೊನೆಯದಾದ ಗುದದ್ವಾರದಿಂದ ಶರೀರದಲ್ಲಿ ಪ್ರವೇಶವಾದ ಪದಾರ್ಥವನ್ನು ಪಚನ ಮಾಡಿದ ನಂತರ ನಿರುಪಯುಕ್ತವಾದುದನ್ನು ಹಾಗೂ ಅಪಾನ ವಾಯುವನ್ನು ಹೊರಹಾಕುವ ಅದ್ಭುತ ಶಕ್ತಿಯನ್ನು ಇವೆಲ್ಲವುಗಳು ಪ್ರಾಕೃತಿಕವಾದ ವಿಷಯಕ್ಕೆ ಸಂಬಂಧಿಸಿದ್ದುದಾದರೆ ಇನ್ನು ಆಧ್ಯಾತ್ಮಿಕಕ್ಕೆ ಸಂಬಂಧಪಟ್ಟುದನ್ನು ವಿಚಾರಿಸುವಾ.

ಕಣ್ಣು: ಎರಡೂ ಕಣ್ಣುಗಳಿಂದ ಇಷ್ಟಲಿಂಗದ ಮೇಲೆ ಅನಿಮಿಷ ದೃಷ್ಟಿಯಿಂದ ತ್ರಾಟಕ ಯೋಗವನ್ನು ಮಾಡುತ್ತಾ ಹೋಗುವಾಗ ಅದ್ಭುತವಾದ ಬೆಳಗನ್ನು ದರ್ಶಿಸಿ ಬೆಳಗಿನೊಳಗೆ ಒಂದಾಗುವಂಥದು.

ಬೆಳಗಿನೊಳಗಣ ಬೆಳಗು ಮಹಾ ಬೆಳಗು.
ಶಿವಶಿವಾ ಪರಮಾತ್ರಯವೇ ತಾನಾಗಿ
ಶತಪತ್ರ ಕರ್ಮ ಕರ್ಣಿಕಾ ಮಧ್ಯದಲ್ಲಿ
ಸ್ವತಃ ಸಿದ್ಧನಾಗಿರ್ಪ ನಮ್ಮ ಲಿಂಗದೇವಾ
ಎಂದಿದ್ದಾರೆ ಗುರು ಬಸವಣ್ಣನವರು.

(ಮುಂದುವರಿಯುವುದು..)

"ಘನಶರಣ ಅಂಬಿಗರ ಚೌಡಯ್ಯ"

– ಶಾರದಾ ಬಸವರಾಜು

ಹೊಳೆಯ ದಾಂಟಿಸಲೆಂದು
ಹರಿಗೋಲು ಹಾಕಿದರೆ
ಹೊಳೆಬತ್ತಿ ಹರಿಗೋಲು ಉಳಿಯಿತಲ್ಲ
ಹೊಳೆಯ ದಾಂಟಿಪರನು ಕಳೆದು ಕಂಗೊಳಿಸಿದನು
ಇಳೆಯೊಡಯ ಬಸವನ್ನೆ ಯೋಗಿನಾಥ

– ಲಿಂಗಾಂಗ ಯೋಗಿ ಸಿದ್ಧರಾಮೇಶ್ವರರು

ಭವಸಾಗರ ದಾಂಟಿಸಲು ಮೂರಕ್ಷರದ 'ಬಸವ' ಎಂಬ ಪ್ರಣವಾಕ್ಷರವೇ ಸಾಕು. ಅಂತಹ ದಿವ್ಯವಾದ ಮಂತ್ರ ಶಕ್ತಿಯಲ್ಲಿ ಅತ್ಯದ್ಭುತವಾದ ಪವಾಡವೇ ನಡೆದಿದೆ. ಭವಸಾಗರದಲ್ಲಿ ಬಿದ್ದು, ತೇಲಿ ಮುಳುಗುತ್ತಿರುವ ಜೀವಿಗಳನ್ನು ಲಿಂಗಾಯಿತ ಧರ್ಮ ಎಂಬ ಹಡಗಲ್ಲಿ ಕೂರಿಸಿಕೊಂಡು ಬಂದ ಬಂದವರನ್ನೆಲ್ಲಾ ದಡಸೇರಿಸಿ ಮುಕ್ತಾತ್ಮರನ್ನಾಗಿ ಮಾಡುತ್ತಿದ್ದಾರೆ, ಗುರುಬಸವಣ್ಣನವರ ಅಂತಹ ಶರಣರಲ್ಲಿ ಒಬ್ಬರು ಭೌತಿಕವಾದ ಹೊಳೆಯನ್ನು ದಾಟಿಸುತ್ತಿದ್ದ ಶ್ರಮಜೀವಿ ಅಂಬಿಗರ ಚೌಡಯ್ಯನವರೂ ಒಬ್ಬರು. ಗುರುಬಸವಣ್ಣನವರ ಪರಿಶ್ರಮಕ್ಕೆ ಹೆಗಲುಕೊಡಲು ಬಂದಂತಹ ಮಹಾಶರಣ ಅಂಬಿಗರ ಚೌಡಯ್ಯನವರು. ಅವರ ಮಾತು ಒರಟಾದರೂ ಮನಸ್ಸು ಮಾತ್ರ ಮೃದು. ಇದು ಗುರುಬಸವಣ್ಣನವರನ್ನು ಆಕರ್ಷಿಸಿತು. ಹೊಳೆಯನ್ನು ದಾಟಿಸುತ್ತಲೇ ಕೆಲವರಿಗೆ ಕೊಡುವ ಸಾಂತ್ವನದ ನುಡಿಗಳು, ನೀತಿಯ ಮಾತುಗಳು, ಬದುಕಿನ ಕಲೆಗಳ ಬಗ್ಗೆ ಹೇಳುತ್ತಾ, ಜನರನ್ನು ಹೊಳೆ ದಾಂಟಿಸುತ್ತಿದ್ದ ಪರಿ ಗುರುಬಸವ ತಂದೆಗೆ ಕೆಲ ಶರಣರಿಂದ ಗೊತ್ತಾಯಿತು.

ಇಂತಹ ಸದ್ಗುಣಶಾಲಿ ಚೌಡಯ್ಯನವರನ್ನು ನೋಡಬೇಕೆಂಬಾಸೆಯನ್ನು ಶರಣರ ಮುಂದಿಟ್ಟರು. ಆಗ ಶರಣರು ದೋಣಿನಡೆಸುತ್ತಿರುವ ಚೌಡಯ್ಯನವರಿಗೆ ವಿಷಯ ತಿಳಿಸಿದರು.

ಆಗ ಚೌಡಯ್ಯನವರು "ನನ್ನನ್ನು ಗುರುಬಸವಣ್ಣನವರು ಬರ ಹೇಳಿದರೆ! ... ನಾನು ನೋಡಿದರೆ, ಅಂಬಿಗರವ, ಅಸ್ಪೃಶ್ಯ, ನನ್ನಂಥವ ಮಂಗಳಮೂರ್ತಿ ಬಸವಣ್ಣನವರ ಅನುಭವ ಮಂಟಪಕ್ಕೆ ಬರಲು ಯೋಗ್ಯನೇ? ಇಲ್ಲ ... ಇಲ್ಲ ... ಬರಲಾರೆ. ಆ ಅಪ್ಪನನ್ನು ದೂರದಿಂದಲೇ ನೋಡಿ ಶರಣೆನ್ನುತ್ತೇನೆ" ಎಂದರು.

ಆಗ ಶರಣರು ಅಯ್ಯ ... "ಗುರುವೇ ನಿನ್ನನ್ನು ಕರೆದ ಪುಣ್ಯ ನಿನಗೆ ದೊರೆತಿದೆ. ಇಂತಹ ಭಾಗ್ಯ ಎಲ್ಲರಿಗೂ ದೊರಕುವುದಿಲ್ಲ"ಎಂದರು.

ಚೌಡಯ್ಯನವರು : "ಅಣ್ಣಾ, ನೀವು ಹೇಳಿದಂತೆ ನನ್ನ ಭಾಗ್ಯ ಹಿರಿದಾದುದು. ಆದರೆ; ನಾನು ಮೊದಲೆ ಹೇಳಿದಂತೆ ಅಲ್ಲಿಗೆ ಬರಲು ಅರ್ಹನಾದ ವ್ಯಕ್ತಿಯಲ್ಲ. ಈ ದೃಶ್ಯ ಉತ್ತಮರ ಕಣ್ಣಿಗೆ ಬಿದ್ದರೆ ಏನೆಲ್ಲಾ ಅನಾಹುತ ಆಗಬಹುದು" ಎಂದರು.

ಶರಣರು : ಅಯ್ಯನವರೇ, ನಾವೆಲ್ಲಾ ಬೇರೆ ಬೇರೆ ಜನಾಂಗದಿಂದ ಬಂದವರು. ಗುರು ಬಸವಣ್ಣನವರ ಕೃಪೆಯಿಂದ ನಾವೆಲ್ಲರೂ ಒಂದೇ ಎಂಬ ಭಾವ ಬೆಳೆಸಿದ್ದೇವೆ. ಇಲ್ಲಿ ಜಾತಿ, ವರ್ಣ, ವರ್ಗ ಬೇಧವಿಲ್ಲ, ಮೇಲುಕೀಳೆಂಬ ಭಾವವಿಲ್ಲ, ಅಂತಹ "ಅನುಭವ ಮಂಟಪ"ಕಟ್ಟಿದ್ದಾರೆ ಗುರು ಬಸವಣ್ಣನವರು. ಅವರು ಎಲ್ಲರನ್ನೂ ಬಹುವಾಗಿ ಪ್ರೀತಿಸುತ್ತಾರೆ.

ಅಂತವರ ಸಂಗದಿಂದ ನಾವೆಲ್ಲರೂ ಪಾವನರಾಗಿದ್ದೇವೆ ಎಂದು ಶರಣರು ನುಡಿಯುತ್ತಾ, ಬನ್ನಿ ಚೌಡಯ್ಯನವರೇ ನಿಮ್ಮ ಭಾಗ್ಯದ ಬಾಗಿಲು ತೆರೆದಿದೆ. ಗುರು ಬಸವಣ್ಣನವರ ದೃಷ್ಟಿ ನಿಮ್ಮತ್ತ ಹರಿದಿದೆ ಎಂದಾಗ,

ಚೌಡಯ್ಯನವರಿಗೆ ಗುರು ಬಸವಣ್ಣನವರ ದೃಷ್ಟಿ ನನ್ನತ್ತ ಹರಿದಿದೆ ಎಂದಾಗ ಆಹಾ ಎಂತಾ ಭಾಗ್ಯಶಾಲಿ ನಾನು, ಎಂತಹ ಪುಣ್ಯಶಾಲಿ ನಾನು ಎಂದು ಅತ್ಯಾನಂದದಿಂದ ಬರುತ್ತೇನೆ ಶರಣರೆ ಆ ಗುರುವನ್ನು ನೋಡಲು ಅಭ್ಯಂಜನ ಸ್ನಾನ ಮಾಡಿ ಮಡಿ ಮಾಡಿದ ವಸ್ತ್ರವನ್ನುಟ್ಟು ಬರುತ್ತೇನೆ ಎಂದು ಹೇಳಿ ಕಳುಹಿಸಿದರು ಚೌಡಯ್ಯನವರು.

ಸಂತಸದಿಂದ ಸ್ನಾನ ಮಾಡಿಇದ್ದುದರಲ್ಲಿಯೇ ಸ್ವಚ್ಛವಾದ ಮಡಿಯನ್ನುಟ್ಟು ಅನುಭವ ಮಂಟಪದತ್ತ ನಡೆದರು ಚೌಡಯ್ಯನವರು. ಅನುಭವ ಮಂಟಪದ ದ್ವಾರದಮುಂದೆ ನಿಂತಿದ್ದಾರೆ ಚೌಡಯ್ಯನವರು. ಒಳಗೆ ಹೋಗಬೇಕೆ ಬೇಡವೇ ಎಂದು ಯೋಚಿಸುತ್ತಿದ್ದಾರೆ. ಮನದೊಳಗೆ ಏನೋ ಒಂದು ರೀತಿಯ ಭಯವುಂಟಾಗಿದೆ ಚೌಡಯ್ಯನವರಿಗೆ.

ಆಗ ಶರಣು ಶರಣಾರ್ಥಿ – ಅಣ್ಣನವರೇ ಬನ್ನಿ ಒಳಗೆ ಎಂಬ ಹಿತಮಿತವಾದ ನಯ ವಿನಯದಿಂದ ತಲೆಬಾಗಿ ಕರೆದ ಶರಣರನ್ನು ಕಂಡು ದಿಗ್ಭ್ರಾಂತರಾದರು ಚೌಡಯ್ಯನವರು. ನಂತರ ಅವರೂ ಸಹ ನಮಸ್ಕರಿಸುತ್ತಾ ಅಡ್ಡ ಬಿದ್ದೆ ಶರಣರೇ ಎಂದರು.

ಶರಣರು ಚೌಡಯ್ಯನವರನ್ನು ಅತಿ ಪ್ರೀತಿಯಿಂದ ತಮ್ಮ ಬಂಧು ಎಂಬಂತೆ ಕೈಹಿಡಿದು ಪ್ರಸಾದ ಗೃಹಕ್ಕೆ ಕರೆದುಕೊಂಡು ಹೋಗಿ ಪ್ರಸಾದಕೊಟ್ಟು ನಂತರ ಅಂದಿನ ಅನುಭವ ಮಂಟಪಕ್ಕೆ ಕರೆದುಕೊಂಡು ಬಂದಿದ್ದಾರೆ. ಆಗ ಅಂಬಿಗರ ಚೌಡಯ್ಯನವರು ವಿಭೂತಿ, ರುದ್ರಾಕ್ಷಿ ಧರಿಸಿದ ಶರಣರನ್ನು ನೋಡಿ ಕೈಮುಗಿದು ಬಾಗಿದರು. ಎಲ್ಲಾ ಶರಣರು, ಶರಣು ಶರಣಾರ್ಥಿ ಎಂದರು. ಚೌಡಯ್ಯನವರ ಕಣ್ಣು ತಾಯಿಯನರಸುವ ಕರುವಿನಂತೆ, ಅವರ ದೃಷ್ಟಿ ಗುರುಬಸವ ತಾಯಿಯನ್ನು ಹುಡುಕುತ್ತಿದೆ ಅನುಭವ ಮಂಟಪದ ಸುತ್ತಮುತ್ತಲು. ಅದೇ ಸಮಯದಲ್ಲಿ ಗುರುಬಸವಣ್ಣನವರಿಗೆ ಜಯವಾಗಲಿ ಎಂಬ ಘೋಷ ಹೊರಗಿನ ಬಾಗಿಲಿನಿಂದ ಕೇಳಿಬಂದಾಗ ಎಲ್ಲಾ ಶರಣರು ಎದ್ದು ನಿಂತು ಶರಣು ಶರಣಾರ್ಥಿ ಎಂದು ಹೇಳುತ್ತಿದ್ದಾರೆ. ಚೌಡಯ್ಯನವರೂ ಸಹ ಎದ್ದು ನಿಂತು ಕೈ ಮುಗಿದಿದ್ದಾರೆ. ತಾನು ಅಸ್ಪೃಶ್ಯನೆಂಬ ಭಾವದಿಂದ ಬಹುದೂರ ನಿಂತಿದ್ದಾರೆ, ಏನೂ ಅರಿಯದ ಕೂಸಿನಂತೆ. ಕಣ್ಣರಿಯದಿದ್ದರೂ ಕರುಳರಿಯದೇ ಎಂಬಂತೆ ಎಲ್ಲಾ ಶರಣರು ಕುಳಿತರೂ ತಾನು ಮಾತ್ರ ಕೈಕಟ್ಟಿ ಬಾಗಿನಿಂತಿದ್ದ ಚೌಡಯ್ಯನವರ ಹತ್ತಿರ ಬರುತ್ತಾರೆ ಗುರುಬಸವಣ್ಣನವರು. ಆದರೆ ಚೌಡಯ್ಯನವರು ಕಂಪಿಸುತ್ತಿದ್ದಾರೆ ಭಯದಿಂದ. ಇಂತಹ ಮುಗ್ಧ ಶಿಶುವನ್ನು ಪ್ರೀತಿಯಿಂದ ಆಲಂಗಿಸಿದ್ದಾರೆ ಗುರುಬಸವಣ್ಣನವರು. ಚೌಡಯ್ಯನವರಿಗಂತೂ ಆ ಸ್ಪರ್ಶ ತನ್ನ ಅಸ್ಪೃಶ್ಯತೆಯ ಭಾವವನ್ನೇ ಬದಲಾಯಿಸಿತೋ ಎಂಬಂತೆ, ತನ್ನೊಳಗೆ ಅದಾವುದೋ ದಿವ್ಯ ಶಕ್ತಿ ಸಂಚರಿಸಿದಂತೆ ಮೈಮನ ಪುಳಕಗೊಳ್ಳುತ್ತದೆ. ಗುರುಬಸವಣ್ಣನವರು ಅವರನ್ನು ಕೈಹಿಡಿದು ಶರಣರ ಸಾಲಿನಲ್ಲಿ ಕೂರಿಸುತ್ತಾರೆ. ಚೌಡಯ್ಯನವರಿಗಂತೂ ತಾನು ದೋಣಿ ನಡೆಸುವಾಗ ಕೆಲಶರಣರು ಆಡಿದ ಮಾತು ನೆನಪಾಯಿತು.

ಗುರುಬಸವಣ್ಣನವರು ಜಾತಿ – ವರ್ಣ – ವರ್ಗ ಬೇಧವಿಲ್ಲದೆ ಎಲ್ಲರನ್ನು ಸಮಾನವಾಗಿ ಕಾಣುತ್ತಾರೆ ದಯೆ, ಕರುಣೆ, ಪ್ರೀತಿಯನ್ನು ಹೆಣ್ಣು ಗಂಡು ಎಂಬ ಭೇದವಿಲ್ಲದೆ

ಹರಿಸಿದ್ದಾರೆ. ಅಸ್ಪೃಶ್ಯರನ್ನೂ ಸಹ ಸಂಸ್ಕಾರಕೊಟ್ಟು ಶರಣರನ್ನಾಗಿ ಮಾಡಿದ್ದಾರೆ. ಅವರಿಗೆ ಮೇಲು – ಕೀಳು ಎಂಬುವುದಿಲ್ಲ. ಅಪ್ಪನು ನಮ್ಮ ಮಾದಾರ ಚನ್ನಯ್ಯ, ಬೊಪ್ಪನು ನಮ್ಮ ಡೋಹಾರ ಕಕ್ಕಯ್ಯ ಎಂದು ಎಲ್ಲರನ್ನೂ ಅಪ್ಪಿಕೊಂಡಿದ್ದಾರೆ, ಒಪ್ಪಿಕೊಂಡಿದ್ದಾರೆ, ಅಂತಹ ಕರುಣಾ ಮೂರ್ತಿ ಬಸವಣ್ಣನವರು, ಎಂಬ ನುಡಿಯ ಅಲೆಯಲ್ಲಿ ತೇಲುತಿದ್ದ ಚೌಡಯ್ಯನವರಿಗೆ.

ಎಲ್ಲಾ ಶರಣ ಬಂಧುಗಳಿಗೆ ಶರಣು ಶರಣಾರ್ಥಿ ಎಂಬ ಶಬ್ದ ಕೇಳಿದ ತಕ್ಷಣವೇ ನಿಶ್ಯಬ್ದವಾಯಿತು ಮನಸ್ಸಿನ ನೆನಹಿನ ಅಲೆಗಳು.

ಓಹ್, ನಾನೆಲ್ಲಿದ್ದೇನೆ ? ನಾನು ಕೇಳಿದ ನುಡಿಗಳಾದರೂ ಯಾರದು ? ಅದ್ದೋ ಗುರುಬಸವಣ್ಣನವರದು ಕೂಡಲೇ ಎಚ್ಚೆತ್ತು ನುಡಿದರು ಶರಣು ಶರಣಾರ್ಥಿ. ಗುರುಬಸವಣ್ಣನವರ ದೃಷ್ಟಿ ಮತ್ತೆ ಬಿತ್ತು ಶರಣು ಶರಣಾರ್ಥಿ ಎಂದ ಶರಣ ಚೌಡಯ್ಯನವರ ಮೇಲೆ. ಪ್ರೀತಿಯಿಂದ ಅವರನ್ನೇ ನೋಡುತ್ತಾ ನುಡಿದರು.

ಇವನಾರವ ಇವನಾರವ ಇವನಾರವನೆಂದೆನಿಸದಿರಯ್ಯ
ಇವನಮ್ಮವ ಇವನಮ್ಮವ ಇವನಮ್ಮವ ಎಂದೆನಿಸಯ್ಯ
ಲಿಂಗದೇವೆ ನಮ್ಮ ಮಹಾಮನೆಯ ಮಗನೆಂದೆನಿಸಯ್ಯ

ಶರಣ ಬಂಧುಗಳೇ, ದೇವನು ಇತ್ತ ಈ ಮಹಾಮನೆಯಲ್ಲಿ ನಾವು ನೀವು ಎಲ್ಲರೂ ಸೃಷ್ಟಿಕರ್ತ ಪರಮಾತ್ಮನ ಮಕ್ಕಳು. ಇಲ್ಲಿ ನಾವು ನೀವೆಲ್ಲರೂ ಒಂದೇ; ಇಲ್ಲಿ ಜಾತಿ ಭೇದ, ವರ್ಣ ಭೇದ, ವರ್ಗ ಭೇದವಿಲ್ಲ. ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ, ಹಾಸನನಿಕ್ಕಿ ಸಾಲಿಗನಾದ ಹೀಗೆ ಅವರವರು ಮಾಡುವ ಕಾಯಕದಿಂದ ಅವರನ್ನು ಕಮ್ಮಾರ, ಮಡಿವಾಳ, ಅಕ್ಕಸಾಲಿಗ ಹೀಗೆ ನಾನಾ ರೀತಿಯ ಹೆಸರುಗಳಿಂದ ಗುರುತಿಸಲಾಗಿದೆಯೇ ವಿನಾ ಇದರಲ್ಲಿ ಯಾವ ಜಾತಿಯ ಹೆಸರೂ ಬರುವುದಿಲ್ಲ. ಇದು ಅವರವರು ಮಾಡುವ ವೃತ್ತಿಯಾಗಿದೆ. ಅದೇ ರೀತಿ ಇಂದು ಹೊಸದಾಗಿ ಬಂದಂತಹ ಚೌಡಯ್ಯ ನವರನ್ನು ಅಂಬಿಗ ಎಂದು ಕರೆಯಲು ಕಾರಣ ತ್ರಿಪುರಾಂತಕ ಕೆರೆಯ ಆಕಡೆಯಿಂದ ಈಕಡೆಗೆ ಜನರನ್ನು ದಾಂಟಿಸುವ ಕಾಯಕ ಚೌಡಯ್ಯನವರದ್ದಾಗಿದೆ. ಇದರಿಂದ ಎಷ್ಟೋ ಜನರಿಗೆ ಉಪಯೋಗವಾಗಿದೆ. ಆಕೆರೆ ದಾಟಿಸುವ ಅಂಬಿಗನೇ ಇಲ್ಲದಿದ್ದರೆ ಈಜು ಬರದ ಎಷ್ಟೋ ಜನರಿಗೆ ದಡ ಸೇರಲು ಎಷ್ಟು ಕಷ್ಟವಾಗುತ್ತಿತ್ತು. ಅಂತಹ ಅಮೂಲ್ಯ ಕೆಲಸವನ್ನು ಕೈಗೊಂಡಿದ್ದಾರೆ ನಮ್ಮ ಶರಣರು.

ಆದರೆ, ಇದೊಂದೆ ಜೀವನದ ಸಾಹಸವಲ್ಲ. ಇನ್ನು ಮಾಡಬೇಕಾದ ಕೆಲಸ ಇವರಿಂದಾಗಬೇಕಾಗಿದೆ. ಭೌತಿಕವಾದ ನದಿಯನ್ನು ಎಲ್ಲರೂ ದಾಟಬಲ್ಲರು. ಆದರೆ ಭವಸಾಗರವನ್ನು ದಾಟಲು ಮಹಾಸಾಹಸವನ್ನೇ ಪಡಬೇಕಾಗಿದೆ. ಇಂತಹ ಭವಸಾಗರವನ್ನು ದಾಟಲು ಲಿಂಗಾಯತ ಧರ್ಮವೆಂಬ ಗಟ್ಟಿಮುಟ್ಟಾದ ಹಡಗನ್ನು ತಯಾರಿಸಿದ್ದೇವೆ. ಇಲ್ಲಿ ಇಷ್ಟಲಿಂಗವೆಂಬ ಮೇಟಿಗೂಟ ನೆಟ್ಟಿದ್ದೇವೆ. ಲಿಂಗಾಂಗ ಯೋಗ ಸಾಧನೆ ಎಂಬ ಹರಿಗೋಲಹಾಕಿ ಈ ಭವಸಾಗರ ದಾಂಟಬೇಕಾಗಿದೆ. ನಮ್ಮ ಗುರಿ ಪರಮಾತ್ಮ. ಜೀವಾತ್ಮನಿಗೆ ಪರಮಾತ್ಮನ ಸೇರುವುದೇ ಮಹತ್ಸಾಧನವಾಗಿದೆ. ಇಂತಹ ಸಾಧನೆ, ಇಷ್ಟಲಿಂಗ ದೀಕ್ಷಾ ಸಂಸ್ಕಾರದಿಂದ ಆಗಬೇಕಾಗಿದೆ. ಇಲ್ಲದಿದ್ದರೆ ಮತ್ತೆ ಮತ್ತೆ ನಾವು ಭವಚಕ್ರಕ್ಕೆ ಬೀಳುತ್ತೇವೆ, ಹುಟ್ಟಿ ಹುಟ್ಟಿ ಬರುತ್ತೇವೆ. ಕಷ್ಟದ ಮೇಲೆ ಕಷ್ಟ ಅನುಭವಿಸುತ್ತೇವೆ. ಇಂತಹ ಭವಸಾಗರ ಎಂತಹವರನ್ನೂ ನಡುಗಿಸುವ ಒಂದು ಬಹುದೊಡ್ಡ ಅಲೆ.

ಸಂಸಾರ ಸಾಗರದ ತೆರೆಕೊಬ್ಬಿ
ಮುಖದಮೇಲೆ ಅಲೆವುತ್ತಿದೆ ನೋಡ
ಸಂಸಾರ ಸಾಗರ ಉರದುದ್ದವೇ ಹೇಳಾ
ಸಂಸಾರ ಸಾಗರ ಕೊರಳುದ್ದವೇ ಹೇಳಾ
ಸಂಸಾರ ಸಾಗರ ಶಿರದುದ್ದವಾದ ಬಳಿಕ ಏನ ಹೇಳುವೆನಯ್ಯ?
ಅಯ್ಯಾ, ಅಯ್ಯಾ, ಎನ್ನ ಹುಯ್ಯಲ ಕೇಳಯ್ಯ
ಲಿಂಗದೇವ ನಾನೇವೆನೇವೆನಯ್ಯ.

ಗುರುಬಸವಣ್ಣನವರ ಈ ಅನುಭಾವಾಮೃತದ ವಚನ ಚೌಡಯ್ಯನವರ ಮನ ಅಲುಗಿಸಿತು. ನಾನೇನೋ ಕೇವಲ ಹೊಳೆ ದಾಟಿಸುವ ಅಂಬಿಗ ಆದರೆ ಗುರುಬಸವ ತಂದೆ ಹೇಳುತ್ತಿದ್ದಾರೆ, ಸಂಸಾರ ಸಾಗರದ ಆರ್ಭಟದ ವೈಖರಿಯನ್ನು ನಮ್ಮ ಕಣ್ಣಮುಂದೆ ಇಡುತ್ತಿದ್ದಾರೆ. ಆದರೆ ಅದೇನೋ ನನಗೆ ತಿಳಿದುಬರುತ್ತಿಲ್ಲ. ಇದನ್ನು ಆ ಗುರುವಿನಲ್ಲಿ ಕೇಳಿಬಿಡೋಣವೇ ಎಂದು ಧೈರ್ಯತಂದುಕೊಂಡು ಎದ್ದು ನಿಂತು ಕೇಳಿದರು ಚೌಡಯ್ಯನವರು. 'ಅಪ್ಪನವರೇ, ಏನೂ ತಿಳಿಯದ ಅಲ್ಪನಾದ ನಾನೊಂದು ನಿಮ್ಮಲ್ಲಿ ಪ್ರಶ್ನೆಯನ್ನು ಕೇಳಬಹುದೇ' ಎಂದರು. ಅದಕ್ಕೆ ಗುರುಬಸವಣ್ಣನವರು ನೀವು ಅಲ್ಪರಲ್ಲ ಶರಣರೇ ನಿಮ್ಮಲ್ಲಿರುವ ಧೈರ್ಯ ಕೆಟ್ಟದ್ದನ್ನು ತಿರಸ್ಕರಿಸಿ ಒಳ್ಳೆಯದನ್ನು ತಿಳಿಸುವ ಎದೆಗಾರಿಕೆಯನ್ನು ಕೆಲವು ಶರಣರಿಂದ ಕೇಳಿ ತಿಳಿದುಕೊಂಡದ್ದರಿಂದ ನಿಮ್ಮನ್ನು ಇಲ್ಲಿಗೆ .ಕರೆಸಿಕೊಳ್ಳುವ ಸೌಭಾಗ್ಯ ಎಮಗಾಯಿತು. ಕೇಳಿ ನಿಮ್ಮದೇನಾದರೂ. ಸಮಸ್ಯೆ ಇದ್ದರೆ. ಇಲ್ಲಿ ಉತ್ತರಿಸುತ್ತೇವೆ. ಇದೊಂದು ಆಧ್ಯಾತ್ಮಿಕ ವಿಶ್ವವಿದ್ಯಾನಿಲಯ. ಇಲ್ಲಿ ಎಲ್ಲಾ ಪ್ರಶ್ನೆಗಳಿಗೂ ಉತ್ತರವಿದೆ. ಇಲ್ಲಿಗೆ ಬಂದ ಯಾವ ಸಾಧಕ ಶರಣನೂ ಕಲಿತು ಅನುಭಾವಿ ಯಾಗಿದ್ದಾನೆ. ತೇರ್ಗಡೆಯೂ ಆಗಿದ್ದಾರೆ. ಅಂತಹ ಶರಣರು ಇಲ್ಲಿ ತುಂಬಿ ತುಳುಕುತ್ತಿದ್ದಾರೆ. ಅಂತಹ ಶರಣರ ಸಾಲಿನಲ್ಲಿ ನೀವೂ ಒಬ್ಬರಾಗಬಹುದು ಚೌಡಯ್ಯನವರೇ, "ದಯವಿಟ್ಟು ನಿಮ್ಮ ಪ್ರಶ್ನೆ ಏನೆಂದು ಹೇಳಿ." ಗುರುಬಸವ ತಂದೆಯ ಪ್ರೀತಿಯ ವಾಣಿ ಇನ್ನಷ್ಟು ಮುದ ತಂದಿತು ಚೌಡಯ್ಯನವರಿಗೆ. ಅವರು ವಿನಯದಿಂದ ಕೇಳಿದರು.

"ಹಾಗಾದರೆ ಭವಸಾಗರ ಎಂದರೇನು? ಇದನ್ನು ದಾಂಟಿಸುವವರು ಯಾರು? ಅವರು ನಮಗೆ ಎಲ್ಲಿ ಸಿಗುತ್ತಾರೆ? ಇದು ಎಲ್ಲರಿಗೂ ಲಭ್ಯವೇ ಕೇವಲ ಕೆಲವರಿಗೆ?" ಮಾತ್ರವೇ ಎಂದು ಕೇಳಿದರು.

ಗುರುಬಸವಣ್ಣನವರು – ಚೌಡಯ್ಯನವರ ಪ್ರಶ್ನಿಸುವ ಗುಣ ಬಸವಣ್ಣನವರಿಗೆ ಬಹು ಮೆಚ್ಚಿಗೆಯಾಯಿತು. "ಇದು ಸಮಾಜಕ್ಕೆ ಬೇಕಾದಂತಹ ಒಂದು ಉತ್ಕೃಷ್ಟ ಪ್ರಶ್ನೆ ಇದು ಜಗತ್ತಿಗೆ ಬೇಕು.

'ಭವ' ಎಂದರೆ ಹುಟ್ಟು ಸಾವುಗಳ ದಂದುಗವೇ ಭವ. ಹುಟ್ಟು ಸಾವು ಬಾಳ ನಾಣ್ಯದ ಎರಡು ಮುಖಗಳಿದ್ದಂತೆ 'ಅಭವ' ಎಂದರೆ ಹುಟ್ಟು ಸಾವುಗಳ ದಂದುಗ ಇಲ್ಲದವನು, ಅವನೇ ಪರಮಾತ್ಮ. ಜೀವಿಗಳೆಲ್ಲರೂ ಈ ಹುಟ್ಟು ಸಾವಿನ ಜಂಜಡದ ಚಕ್ರದಲ್ಲಿ ಸಿಕ್ಕಿಕೊಂಡು ಸುತ್ತುವವರೇ ಆಗಿದ್ದಾರೆ. ಇದಕ್ಕೆಲ್ಲಾ ಕಾರಣ ಸೃಷ್ಟಿಕರ್ತ ಪರಮಾತ್ಮನನ್ನು ಮರೆತದ್ದೇ ಆಗಿದೆ. ಅದಕ್ಕೆ ಭವಬಂಧನ ಭವಪಾಶವಾದ ಕಾರಣ ಹಿಂದಿನ ಜನ್ಮದಲ್ಲಿ ನಾವು ಪರಮಾತ್ಮನನ್ನು ಮರೆತದ್ದೇ ಕಾರಣವಾಗಿದೆ.

ಈ ಜಗತ್ತನ್ನು ನಿರ್ಮಾಣ ಮಾಡಿದ ಈ ಜೀವಾತ್ಮನನ್ನು ಸೃಷ್ಟಿಮಾಡಿದ ಸೃಷ್ಟಿಕರ್ತನ ಬಗ್ಗೆ ಕೃತಜ್ಞತೆ ತಾಳದೆ ಬದುಕುವುದು ಮುಂದಿನ ಭವಕ್ಕೆ ಕಾರಣವಾಗಿದೆ. ದೇವರು ಮಹಾದಾನಿ ಪಂಚಭೂತಾತ್ಮಕ ಪ್ರಪಂಚ ಸೃಷ್ಟಿಸಿದ್ದಾನೆ. ಅತ್ಯಂತ ರಮಣೀಯವಾದ ನಿಸರ್ಗವನ್ನು ಕೊಟ್ಟಿದ್ದಾನೆ. ಇಳೆ, ಬೆಳೆ, ಗಾಳಿ, ಬೆಳಕು ಎಲ್ಲವನ್ನೂ ಕೊಟ್ಟಿದ್ದಾನೆ. ಅರಳುವ ಹೂವು, ಉದಿಸುವ ಸೂರ್ಯ ಒಂದೊಂದೂ ದೇವನ ಅಮೂಲ್ಯ ಕೊಡುಗೆ. ಇಂತಹ ನಿಸರ್ಗವನ್ನು ಆಸ್ವಾದಿಸುವ ಅನುಭವಿಸುವ ಹೃದಯ, ಮನ, ಬುದ್ಧಿಗಳುಳ್ಳ ಮಾನವ ಜನ್ಮ ದೇವರು ಕೊಟ್ಟ ವರ. ಇದನ್ನರಿತು ದೇವರನ್ನು ಕೊಂಡಾಡದೇ, ಪೂಜಿಸದೇ ಪ್ರಾರ್ಥಿಸದೇ, ಧ್ಯಾನಿಸದೇ ವ್ಯಕ್ತಿ ಕೇವಲ ತನ್ನ ಸುಖ ಭೋಗಗಳಲ್ಲೇ ಮುಳುಗಿ ದೇವನನ್ನು ಮರೆಯುತ್ತಾನೆ. ಈ ಜಗತ್ತು ದೇವರ ಮನೆ; ಇಲ್ಲಿ ನಾವು ನೀವೆಲ್ಲರೂ ಬಾಡಿಗೆದಾರರು ಅಂದಾಗ ಬಾಡಿಗೆ ಕೊಡಲೇ ಬೇಕಲ್ಲವೇ ಎನ್ನುತ್ತಿದ್ದಂತೆಯೇ ಚೌಡಯ್ಯನವರು ಎದ್ದು ನಿಂತು, ದೇವರಿಗೆ ಬಾಡಿಗೆಯೇ ? ಎಂದು ಪ್ರಶ್ನಿಸಿದರು. ಅದನ್ನು ಕೊಡುವುದಾದರೂ ಹೇಗೆ ? ಗುರುಬಸವಣ್ಣನವರಿಗೆ ಪ್ರಶ್ನೆಯ ಮೇಲೆ ಪ್ರಶ್ನೆಯನ್ನು ಕೇಳುವ ಈ ಶರಣ ಅಸಾಮಾನ್ಯರೆನಿಸಿಕೊಂಡರು.

ನೀವು ಕೇಳಿದ ಪ್ರಶ್ನೆ ಸಮಂಜಸವಾಗಿದೆ. ದೇವನಿಗೆ ಹಣ ಒಡವೇ ವಸ್ತ್ರಗಳನ್ನು ಕೊಡುವ ಮೂಢಸಂಪ್ರದಾಯದವರಿದ್ದಾರೆ. ಜಗತ್ತಿನ ಒಡೆಯನೇ ಪರಮಾತ್ಮ; ಅಂತಹವನಿಗೆ ಈ ಕ್ಷುಲ್ಲಕ ವಸ್ತುಗಳನ್ನು ಕೊಟ್ಟು ಮೆಚ್ಚಿಸುತ್ತೇನೆ ಎನ್ನುವುದು ಹಾಸ್ಯಾಸ್ಪದ.

ಆದರೆ, ನಾವು ಬಾಡಿಗೆ ಕೊಡಲೇಬೇಕು. ಅದೇನೆಂದರೆ ಅರ್ಚನೆ, ಪೂಜೆ, ಪ್ರಾರ್ಥನೆ, ಧ್ಯಾನ, ಸೇವೆಗಳೇ ಬಾಡಿಗೆ. ಇದರಿಂದ ಪರಮಾತ್ಮನಿಗೆ ಕೃತಜ್ಞತೆಯನ್ನು ಅರ್ಪಿಸಿದಂತಾಗುತ್ತದೆ. ಇದನ್ನು ಮಾಡದಿದ್ದರೆ ಮತ್ತೆ ಜೀವಿಯು ಭವಪಾಶಕ್ಕೆ ಕಟ್ಟುಬೀಳಬೇಕಾಗುತ್ತದೆ. ಇದನ್ನು ಬಿಡಿಸಿಕೊಳ್ಳಲು ಗುರುವಿನ ಹತ್ತಿರ ಹೋಗಲೇಬೇಕಾಗುತ್ತದೆ.

ಆಗ ಚೌಡಯ್ಯನವರು. "ಗುರುದೇವಾ ನನಗೂ ಈ ಭವಪಾಶದಿಂದ ಬಿಡಿಸಿಕೊಳ್ಳಬೇಕೆಂಬ ಆಸೆಯಾಗಿದೆ. ಅದನ್ನು ಬಿಡಿಸುವ ಗುರು ಯಾರು? ಅದು ನನ್ನಂತಹ ಕೀಳು ಜಾತಿಯವರಿಗೆ ಲಭ್ಯವೇ?" ಎಂದು ಕೇಳಿದರು. ಅದಕ್ಕೆ ಗುರುಬಸವಣ್ಣನವರು ಮಾನವ ಜನ್ಮದಲ್ಲಿ ಹುಟ್ಟಿದವರಿಗೆಲ್ಲರಿಗೂ ಸಾಧ್ಯ. ಇದಕ್ಕೆ ಹೀನ ಕುಲ – ಉತ್ತಮ ಕುಲ ಎಂಬ ಪ್ರಮೇಯವೇ ಇಲ್ಲ. ಕುಂಡಲಿಗನೊಂದು ಕೀಡೆಯತಂದು ತನ್ನಂತೆ ಮಾಡಿತಲ್ಲ, ಕೇಳಿ ನಂಬಯ್ಯ ಲಿಂಗದೇವರ ಶರಣರ ಅನುಭಾವ ಇದಕ್ಕಿಂತ ಕಿರುಕುಳವೇ? ಚೌಡಯ್ಯನವರೇ, ಇದಕ್ಕೆ ಸಾಕ್ಷಿಯಾಗಿ ಇಲ್ಲಿ ಅಸಂಖ್ಯಾತ ಶರಣರು ಕೂಡಿದ್ದಾರೆ. ಇವರಿಂದಲೇ ಕೇಳಿ ತಿಳಿದು ಆನಂದಿಸಿರಿ. ಎಂದೆನ್ನುತ್ತ ಗುರುಬಸವಣ್ಣನವರ ದೃಷ್ಟಿ ಡೋಹಾರಕಕ್ಕಯ್ಯನವರು ಕುಳಿತ ಎಡೆಯಲ್ಲಿ ಹರಿಯುತ್ತದೆ.

ಎನ್ನಯ್ಯ ಕಕ್ಕಯ್ಯನವರೇ ... ನೀವೇ ಇವರಿಗೆ ನಿಮ್ಮ. ಪರಿವರ್ತನಾ ಬದುಕನ್ನು ತಿಳಿಸಿ" ಎಂದು ಬಿನ್ನೈಸಿಕೊಳ್ಳುತ್ತಾರೆ.

ಆಗ ಡೋಹಾರ ಕಕ್ಕಯ್ಯನವರು ... ಎದ್ದು ನಿಂತು, ಎಲ್ಲಾ ಶರಣಬಾಂಧವರಿಗೆ ಶರಣು ಶರಣಾರ್ಥಿ ಎಂದು ನಮಿಸಿ, ದಲಿತೋದ್ಧಾರಕ ಗುರುಬಸವಣ್ಣನವರು ನನ್ನ ಜೀವನವನ್ನೇ ಪಾವನ ಮಾಡಿ ಪರಮ ಪವಿತ್ರಗೊಳಿಸಿದ ತಮ್ಮ ಅನುಭವವನ್ನು ತಮ್ಮ ಅಮೂಲ್ಯ ಅನುಭಾವ ವಚನದ ಮೂಲಕ ಹೇಳುತ್ತಾರೆ.

ಎನ್ನ ಕಷ್ಟ ಕುಲದಲ್ಲಿ ಹುಟ್ಟಿದೆನೆಂಬ ಕರ್ಮವ ಕಳೆದು
ಮುಟ್ಟಿ ಪಾವನವ ಮಾಡಿ ಕೊಟ್ಟನಯ್ಯ
ಎನ್ನ ಕರಸ್ಥಲಕ್ಕೆ ಲಿಂಗವ,
ಆ ಲಿಂಗ ಬಂದು ಸೋಂಕಲೊಡನೆ
ಎನ್ನ ಸರ್ವಾಂಗದ ಅವಲೋಹವಳಿಯಿತ್ತಯ್ಯ.
ಎನ್ನ ತನುವಿನಲ್ಲಿ ಗುರುವ ನೆಲೆಗೊಳಿಸಿದ
ಎನ್ನ ಮನದಲ್ಲಿ ಜಂಗಮವನೆಲೆಗೊಳಿಸಿದ
ಎನ್ನ ಅರುಹಿನಲ್ಲಿ ಪ್ರಸಾದವನೆಲೆಗೊಳಿಸಿದ
ಇಂತಿ ತ್ರಿವಿಧ ಸ್ಥಾನವ ಶುದ್ಧವಮಾಡಿ ಚತುರ್ವಿಧ
ಸಾರಾಯ ಸ್ಥಳವ ಸಂಬಂಧವ ಮಾಡಿದ
ಸಂಗನ ಬಸವಣ್ಣನ ಕರುಣದಿಂದ ಪ್ರಭುದೇವರ
ಶ್ರೀ ಪಾದವ ಕಂಡು ಬದುಕಿದೆನು ಕಾಣಾ ಅಭಿನವ ಮಲ್ಲಿಕಾರ್ಜುನ.

ಆದ್ದರಿಂದ ಶರಣ ಚೌಡಯ್ಯನವರೆ ನಿಮಗೆ ಒಂದು ಅಮೂಲ್ಯ ಅವಕಾಶ ಸಿಕ್ಕಿದೆ. ಇದನ್ನು ದಯವಿಟ್ಟು ಕಳೆದುಕೊಳ್ಳಬೇಡಿ. ಇಂತಹ ಒಂದು ಅಮೂಲ್ಯ ಕ್ಷಣ ಮುಂದೆಂದೂ ಸಿಗಲಾರದು, ಬೇಗ ಗುರುವಿನ ಕರುಣೆಹೊಂದುವುದು ನಿಮ್ಮ ಆದ್ಯ ಕರ್ತವ್ಯವಾಗಿದೆ." ಎಂದು ಎಚ್ಚರಿಸಿದರು ಕಕ್ಕಯ್ಯನವರು.

"ಹೌದು, ಗಾಳಿ ಬಂದಾಗ ತೂರಿಕೊಳ್ಳಬೇಕು. ಇದು ನನಗೆ ಸಿಕ್ಕ ಅತ್ಯಂತ ಅಮೂಲ್ಯ ಅವಕಾಶ." ಎಂದು ಎದ್ದು ನಿಂತು ತಮಗೆ ಎಚ್ಚರಿಕೆ ಮಾತು ಹೇಳಿದ ಕಕ್ಕಯ್ಯನವರಿಗೆ ವಂದಿಸುತ್ತಾ ಗುರುಬಸವತಂದೆಗೆ ವಂದಿಸುತ್ತಾ ಅಪ್ಪಾ ಬಸವಣ್ಣನವರೇ ನಮಗೂ ಲಿಂಗದೀಕ್ಷೆ ಕೊಡುತ್ತೀರಾ ಎಂದು ಬೇಡಿಕೊಂಡರು.

ಗುರುಬಸವಣ್ಣನವರ ಪರುಷವಾಣಿಗೆ ಪ್ರಭಾವಿತರಾದ ಅಂಬಿಗರ ಚೌಡಯ್ಯನವರನ್ನು ಕಂಡು ಗುರುಬಸವಣ್ಣನವರಿಗೆ ಆದ ಆನಂದ ಹೇಳಲಸದಳವಾಗಿತ್ತು. ತಾನು ಕಟ್ಟಿದ ಲಿಂಗಾಯತ ಧರ್ಮವೆಂಬ ಹಡಗನ್ನು ನಡೆಸಲು ಬಂದಂತಹ ದಷ್ಟ ಪುಷ್ಟರಾದ ಅಂಬಿಗ ನನ್ನ ಜೊತೆಗೂಡಿದ ಎಂದು ಸಂತಹ ಪಟ್ಟು ಹಾರೈಸಿದರು. ಅಂಬಿಗರ ಚೌಡಯ್ಯನವರಿಗೆ ದೀಕ್ಷೆ ಯಾರಿಂದ ಆಗುತ್ತದೆಎಂಬುದು ತಿಳಿದುಬಂದಿಲ್ಲ. ದೀಕ್ಷೆಯ ನಂತರ ಇವರಿಗೆ ಗುರುವು ಪಾದತೀರ್ಥ ಪ್ರಸಾದವನ್ನು ಅನುಗ್ರಹಿಸಿದಾಗ ಇವರು ನುಡಿಯುತ್ತಾರೆ, ಜಂಗಮದ ಪಾದತೀರ್ಥ ಪ್ರಸಾದದಿಂದ ಎನ್ನಂಗದ ದೋಷ ಕಳೆಯಿತಯ್ಯ. ಎನ್ನ ಲಿಂಗಕ್ಕೆ ಪ್ರಾಣ ಪ್ರತಿಷ್ಠೆಯಾಯಿತಯ್ಯ ಮತ್ತು ಸಂಗನ ಬಸವಣ್ಣನ ಶರಣರಿಗೆ ಮುಕ್ತಿಯ ಪಥವ ತೋರಿತಯ್ಯ. ಇಂತಹ ಜಂಗಮ ಪಾದತೀರ್ಥಕ್ಕೆ ಎಂತಹ ಹಿರಿಯರಾದರೂ ತಲೆ ಬಾಗಲೇಬೇಕೆಂದು ದೀಕ್ಷಕೊಟ್ಟ ಗುರುಗಳಿಗೆ ನಮಸ್ಕರಿಸುತ್ತಿದ್ದಾರೆ.

ಶರಣರಾಗಿ ಪರಿವರ್ತನೆಗೊಂಡ ಅಂಬಿಗರ ಚೌಡಯ್ಯನವರು ಗುರುಬಸವಣ್ಣನವರ ಬಗ್ಗೆ ಅಪಾರ ಅಭಿಮಾನ ಉಕ್ಕಿ ಹೇಳುತ್ತಾರೆ, "ಬಸವಣ್ಣ ಮಾಡುವ ಭಕ್ತಿ ಶಿಶುವೆಲ್ಲಾ

ಮಾಡಬಹುದಯ್ಯ" ಎಂದು. ಕಾರಣ ಅವರು ಕಲಿಸುವ ದೇವರ ಭಕ್ತಿಯಲ್ಲಿ ಆಡಂಬರದ ಆಚರಣೆಯಿಲ್ಲ, ಮೂಢಾಚಾರಗಳಿಲ್ಲ, ಕಂದಾಚಾರಗಳಿಲ್ಲ, ಹಲವಾರು ದೇವರುಗಳಂತೂ ಇಲ್ಲವೇ ಇಲ್ಲ. ಬಂಡಿ ತುಂಬ ಪತ್ರೆ ಪುಷ್ಪ ಅರ್ಚನೆ ಇಲ್ಲ. ದೇವಾಲಯಕ್ಕೆ ಹೋಗಿ ಪೂಜೆ ಮಾಡಬೇಕೆಂಬ ಒಡಂಬಡಿಕೆಯಿಲ್ಲ. ದೇಹವನ್ನೇ ದೇಗುಲವ ಮಾಡಿ ನಮ್ಮ ಅಂಗಕ್ಕೆ ಲಿಂಗಧರಿಸಿದ್ದಾರೆ. ಎಂದು ಹೇಳಿದ್ದಾರೆ. ಅದಕೆ ಗುರುಲಿಂಗ ಜಂಗಮಕ್ಕೆ ಆಧಾರ ಬಸವಣ್ಣನವರು. ಪಾದೋದಕ ಪ್ರಸಾದಕ್ಕೆ ಆಧಾರ ಬಸವಣ್ಣ; ಸರ್ವಾಪತ್ತಿಗಾಧಾರ ಬಸವಣ್ಣ, ಸ್ವರ್ಗ ಮರ್ತ್ಯ ಪಾತಾಳಕ್ಕೆ ಬಸವಣ್ಣನ ಚೈತನ್ಯ ವಲ್ಲದಿಲ್ಲ. ಆ ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎನ್ನುತಿದ್ದಾರೆ ಅಂಬಿಗರ ಚೌಡಯ್ಯನವರು.

ಅದಕ್ಕೆ ಅಲ್ಲಮ ಪ್ರಭುಗಳು ಹೌದು ಬಸವಣ್ಣನವರು ಎನಗೆಯೂ ಗುರು ನಿನಗೆಯೂ ಗುರು ಜಗವೆಕ್ಕೆಲ್ಲಕೂ ಗುರು ಎಂದು ನುಡಿದಾಗ ಗುರು ಬಸವಣ್ಣನವರನ್ನು ಮೀರಿಸುವವರೂ ಯಾರೂ ಇಲ್ಲ. ನಾವು ಯಾರನ್ನೋ ಗುರು, ಯಾವುದನ್ನೋ ದೇವರು, ಕೇವಲ ಜಂಗಮ ವಸ್ತ್ರ ಲಾಂಛನ ಧಾರಿಯನ್ನೇ ಜಂಗಮವೆಂದು ತಿಳಿದು ಅವರಡಿಗೆ ಎರಗುತ್ತಿದ್ದ ನಮ್ಮನ್ನು ಬಡಿದೆಬ್ಬಿಸಿ ಪಾರು ಮಾಡಿದ ಬಸವಣ್ಣನವರಿಗೆ ಎಷ್ಟು ನಮಿಸಿದರೂ ಸಾಲದು: ತನ್ನೆಡೆಗೆ ಬಂದಂತಹ ಎಲ್ಲರನ್ನೂ ಎಂತಹವರನ್ನು ಪರಿವರ್ತಿಸುವ ಪರುಷ ಶಕ್ತಿಯ ಮುಂದೆ ತಾನು ಮೊದಲು ಕಂಡ ಗುರು ಶಿಷ್ಯ ಸಂಬಂಧದಲ್ಲಿ ಅಜಗಜಾಂತರ ವ್ಯತ್ಯಾಸ ಕಂಡುಬರುತ್ತಿದೆ ಚೌಡಯ್ಯನವರಿಗೆ. ಗುರು ಬಸವಣ್ಣನವರಂತಹ ಗುರುವಿಲ್ಲ. ಬಸವಾದಿ ಪ್ರಮಥರಂಥ ಶಿಷ್ಯರಿಲ್ಲ ಎಂದೆನಿಸುತ್ತಿದೆ ಚೌಡಯ್ಯನವರಿಗೆ. ಬಸವಾದಿಪ್ರಮಥರ ಗುರುಶಿಷ್ಯ ಸಂಬಂಧವನ್ನು ಎಷ್ಟು ಹೊಗಳುತ್ತಿದ್ದಾರೋ, ಅಷ್ಟೇ ಕಟುವಾಗಿ ನಿಂದಿಸುತ್ತಿದ್ದಾರೆ, ಗೊಡ್ಡು ಸಂಪ್ರದಾಯದ ಗುರುಶಿಷ್ಯ ಸಂಬಂಧವನ್ನು.

ಗುರುಲಿಂಗ ಜಂಗಮವೆಂದರಿಯದ ಗೊಡ್ಡುಗಳ ಶಿಷ್ಯನ ಮಾಡಿಕೊಂಬವ ಹೆಡ್ಡ ಜಡಜೀವಿಗಳನೆನೆಂಬೆನಯ್ಯ, ಆಚಾರ ಅನಾಚಾರದ ಭೇದವನ್ನರಿಯದ ಹೆಡ್ಡ ಮಾನವರಿಗೆ ಉಪದೇಶವ ಕೊಡುವ ಮತಿಭ್ರಷ್ಟರೇನನೆಂಬೆನಯ್ಯ, ಅವನ ಅಜ್ಞಾನವನ್ನಳಿಯದ ಅವನ ನಡೆನುಡಿಯ ಹಸನ ಮಾಡದೆ ಅವನ ಆದಿಅಂತ್ಯವ ತಿಳಿಯದೇ, ಧನಧಾನ್ಯ ದ್ರವ್ಯದಾಸೆಗೆ ಶಿವದೀಕ್ಷೆಯ ಮಾಡುವನೊಬ್ಬ ಗುರುವು ಹುಟ್ಟಂಧಕನೆಂಬೆನಯ್ಯ. ತನ್ನ ಗುರುತ್ವವನ್ನರಿಯದ ಗುರುವಿಂದ ಉಪದೇಶವ ಪಡೆದವನೊಬ್ಬ ಶಿಷ್ಯನ ಕೆಟ್ಟಗಣ್ಣವನೆಂಬೆನಯ್ಯ, ಇಂತಿವರ ಗುರುಶಿಷ್ಯರೆಂದೆಡೆ ಇಂತಪ್ಪ ಗುರು ಶಿಷ್ಯರಿಬ್ಬರಿಗೆಯೂ ಯಮದಂಡನೆ ತಪ್ಪದೆಂದಾತ ಅಂಬಿಗರ ಚೌಡಯ್ಯ. ಎಂದು ನೇರ ದಿಟ್ಟವಾಗಿ ನುಡಿದ ವಾಣಿಯಿಂದ ಅಲ್ಲಿ ನೆರೆದ ಶರಣರೆಲ್ಲರಿಗೂ ಕಂಪನವುಂಟಾಯಿತು. ಅದರಲ್ಲೂ ಅಲ್ಲಮ ಪ್ರಭುವಿಗಂತೂ ಆಶ್ಚರ್ಯವುಂಟಾಯಿತು. ಬಸವಣ್ಣಾ ನೋಡಿದೆಯಾ ಎಂತಹ ಅಂಬಿಗ, ನಮ್ಮ ಪಡೆಯನ್ನು ಸೇರಿ ಉಜ್ವಲಗೊಳಿಸುತ್ತಿದ್ದಾನೆ, ಇನ್ನು ನೀನು ಕಟ್ಟಿದ ಲಿಂಗಾಯತ ಧರ್ಮವೆಂಬ ಹಡಗು ಸುಲಲಿತವಾಗಿ ಮುನ್ನಡೆಯುವುದಂತೂ ಖಂಡಿತಾ ಎಂದರು. ಗುರುಬಸವಣ್ಣನವರ ಆನಂದಕ್ಕೆ ಪಾರವಿಲ್ಲದಂತಾಯಿತು. ಎನ್ನಯ್ಯ ಎಂದು ಅಪ್ಪಿಕೊಂಡರು, ಹಾರೈಸಿದರು, ಆಶೀರ್ವದಿಸಿದರು, ಚೌಡಯ್ಯನವರನ್ನು. 'ದೋಣಿ ಸಾಗಲಿ ಮುಂದೆ ಹೋಗಲಿ ಭವ ಸಾಗರ ದಾಂಟಿಸುವುದಕ್ಕೆ ಇನ್ನು ಸನ್ನದ್ಧನಾಗು ನಡೆ ಶರಣ' ಎಂದರು.

(ಮುಂದುವರಿಯುವುದು..)








ರಾಷ್ಟ್ರೀಯ ಬಸವ ದಳದಿಂದ ಸೇವಾಕಾರ್ಯಕರ್ತರಿಗೆ ಸನ್ಮಾನ



ಶರಣ ಜ್ಞಾನರತ್ನ ಪ್ರಶಸ್ತಿ, ಶರಣ. ಪಿ. ಸೋಮಶೇಖರ. ಭಾ.ಸೇ.ಆ.(ನಿ.)ರವರಿಗೆ







ಶರಣ ಕಾಯಕರತ್ನ ಪ್ರಶಸ್ತಿ, ಶರಣ.ಕೆ. ಎಸ್. ವಿಶ್ವನಾಥ, ಶರಣ ಸಂಗೀತರತ್ನ ಪ್ರಶಸ್ತಿ
ಶರಣ. ದೇವೇಂದ್ರಕುಮಾರ ಪತ್ತಾರ

Registerd NO/KA/BGW/50/2012-2014, RNI 19980/70, POSTED AT MBC BANGALORE GPO ON 3rd,10th,20th, OF EVERY MONTH. LICENCED TO POST WITHOUT PRE PAYMENT WPP-17, PAGES 32+4 (COVER PAGES)